# ಸಮಣ ಸುತ್ತಂ

ಶ್ರೀಮತಿ ಜಿ. ಎಸ್. ವಸಂತಮಾಲಾ



ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

# ಸಮಣ ಸುತ್ತಂ

ಲೇಖಕರು :

ಶ್ರೀಮತಿ ಜಿ. ಎಸ್. ವಸಂತಮಾಲಾ

ಪ್ರಧಾನ ಸಂಪಾದಕರು :

ಡಾ|| ಎಂ. ಎ. ಜಯಚಂದ್ರ

ಕನ್ನಡ ಪುಸ್ತಕ ಪ್ರಾಧಿಕಾರ

ಕನ್ನಡ ಭವನ, ಬೆಂಗಳೂರು - 2

**SAMANA SUTTAM**

written by G.S. Vasanthamala

First Print 2005

Author

Pages (x + 21) Price : Rs. 10/-

Copies : 2000

ISBN : 181-7713-182-4

Published by

N. Tippeswamy

Administrative Officer

Kannada Pustaka Pradikara

Kannada Bhavan

J.C. Road, Bangalore - 560 002

D.T.P.

Sree Lakshmi Enterprises

Bangalore-560 078

Printer:

**SREERANGA PRINTERS Pvt Ltd**

517, Samudra Gupta Maurya Road,

Bhavaninagar, Bangalore- 19

Ph: 2667 9333, 2652 4757

# ಮುನ್ನುಡಿ

ಭಗವದ್ಗೀತೆ, ಬೈಬಲ್, ಖುರಾನ್ - ಈ ಮೊದಲಾದ ಗ್ರಂಥಗಳು ಆಯಾಯ ಧರ್ಮದ ತಿರುಳನ್ನು ಚೆನ್ನಾಗಿ ಪ್ರಕಾಶಿಸುವ ಪ್ರಾತಿನಿಧಿಕ ಪವಿತ್ರ ಗ್ರಂಥಗಳಾಗಿವೆ. ಈ ಬಗೆಯ ಸರ್ವ ಸಂಪ್ರದಾಯದವರಿಗೆ ಸಮ್ಮತವಾಗುವ ಒಂದು ಗ್ರಂಥ ಜೈನ ವಾಙ್ಮಯದಲ್ಲಿ ಇರಲಿಲ್ಲ. ಈ ಕೊರತೆಯನ್ನು ಮನಗಂಡ ಪೂಜ್ಯ ವಿನೋಬಾಜಿ ಅವರು ಇಂಥದೊಂದು ಗ್ರಂಥ ನಿರ್ಮಾಣವಾಗಲು ಜೈನ ಸಮಾಜಕ್ಕೆ ಪ್ರೇರಣೆ ನೀಡಿದರು. ೧೯೭೪ರಲ್ಲಿ ಘಟಿಸಿದ ಭಗವಾನ್ ಮಹಾವೀರರ ೨೫೦೦ನೆಯ ನಿರ್ವಾಣೋತ್ಸವದ ಐತಿಹಾಸಿಕ ಸಂದರ್ಭದಲ್ಲಿ ಮೂಡಿಬಂದ ಜಿನಧರ್ಮದ ಸಾರ ಸರ್ವಸ್ವವನ್ನು ಪ್ರತಿನಿಧಿಸುವ ಚರಿತ್ರಾರ್ಹ ಪವಿತ್ರ ಗ್ರಂಥವೇ – **"ಸಮಣ ಸುತ್ತಂ".**

ಇದರಲ್ಲಿ ೭೫೬ ಗಾಹೆಗಳಿವೆ. ಇವುಗಳನ್ನು ವಿವಿಧ ಜೈನ ಪ್ರಾಚೀನ ಪ್ರಾಕೃತ ಗ್ರಂಥಗಳಿಂದ ಸಂಗ್ರಹಿಸಲಾಗಿದೆ. ಇವೆಲ್ಲ ಭ.ಮಹಾವೀರರ ಮಾತುಗಳೇ ಆಗಿವೆ. ಇಲ್ಲವೆ ಅವರ ವಿಚಾರಗಳನ್ನು ಅವರ ಕಾಲದಲ್ಲೇ ಅವರ ಶಿಷ್ಯರಾದ ಗಣಧರರು ಜನಭಾಷೆಯಾದ ಪ್ರಾಕೃತದಲ್ಲಿ ಹಿಡಿದಿಟ್ಟವುಗಳಾಗಿವೆ. ಮಹತ್ವಪೂರ್ಣವಾದ ಈ ಗ್ರಂಥವನ್ನು ಶ್ರೀ ಟಿ. ರಘುಚಂದ್ರ ಶೆಟ್ಟಿ ಅವರು ಚೌಪದಿಯಲ್ಲಿ ಕನ್ನಡಿಸಿ, "ಸವಣ-ನುಡಿ-ಮುತ್ತು" ಎಂಬ ಹೆಸರಿನಲ್ಲಿ ಪ್ರಕಟಿಸಿ, ಅಭಿನಂದನಾರ್ಹರಾಗಿದ್ದಾರೆ.

ಅಹಿಂಸಾ ಪ್ರಧಾನವಾದ ಜೈನಧರ್ಮದ ತತ್ತ್ವಗಳನ್ನು ಗ್ರಂಥಗಳನ್ನು ಆಚಾರ್ಯರನ್ನು ಮಹಾನ್ ವ್ಯಕ್ತಿಗಳನ್ನು ಶ್ರೀ ಸಾಮಾನ್ಯರಿಗೆ ಪರಿಚಯಿಸಬೇಕು ಎಂದು ಅಭಿಪ್ರಾಯ ವ್ಯಕ್ತಪಡಿಸಿದ ಕರ್ನಾಟಕ ಸರ್ಕಾರದ ಭ. ಮಹಾವೀರರ ೨೬೦೦ನೆಯ ಜನ್ಮ ಕಲ್ಯಾಣಮಹೋತ್ಸವದ ರಾಜ್ಯ ಸಮಿತಿಯ ಅಧ್ಯಕ್ಷರಾದ ಸನ್ಮಾನ್ಯ ಗೃಹಸಚಿವರಾದ ಶ್ರೀ ಮಲ್ಲಿಕಾರ್ಜುನ ಖರ್ಗೆಯವರ ಆಶಯಕ್ಕನುಸಾರವಾಗಿ ಪ್ರಕಟಣಾ ಸಮಿತಿಯು ಅರ್ಹದ್ಗೀತೆಯಾದ ಸಮಣಸುತ್ತಂ ಬಗ್ಗೆ ಕಿರುಪುಸ್ತಕ ತರಲು ನಿರ್ಧರಿಸಿತು. ಸಮಿತಿಯ ಕರೆಗೆ ಓಗೊಟ್ಟು ಪ್ರಸಿದ್ಧ ಕತೆಗಾರ್ತಿಯಾಗಿರುವ ಶ್ರೀಮತಿ ಜಿ.ಎಸ್.ವಸಂತಮಾಲಾ ಅವರು ಸೊಗಸಾದ ರೀತಿಯಲ್ಲಿ ಈ ಕಿರುಹೊತ್ತಗೆಯನ್ನು ಅತಿಶೀಘ್ರವಾಗಿ ಸಿದ್ಧಪಡಿಸಿ ಕೊಟ್ಟಿರುತ್ತಾರೆ. ಅವರಿಗೆ ಪ್ರಕಟಣಾ ಸಮಿತಿಯು ಆಭಾರಿಯಾಗಿದೆ.

**ಡಾ| ಎಂ.ಎ. ಜಯಚಂದ್ರ**

**ಅಧ್ಯಕ್ಷರು**

ಭಗವಾನ್ ಮಹಾವೀರರ ೨೬೦೦ನೆಯ ಜನಕಲ್ಯಾಣ

ಮಹೋತ್ಸವದ ಪ್ರಕಟಣಾ ಸಮಿತಿ, ಬೆಂಗಳೂರು

## ಒಂದು ದಿನ ಒಳಕೊಂಡಿತ್ತು ನೋಡಾ

ನಮ್ಮ ಕಣ್ಣೆದುರಿಗೆ ಎರಡು ವಾಸ್ತವಗಳಿವೆ. ಒಂದು - ಜನಾಂಗಿಕ ಸಂಸ್ಕೃತಿಯ ಸ್ಮೃತಿ ಸಂಚಯಗಳಂತಿರುವ ಜನಪದ ಪುರಾಣ ಕಥನಗಳನ್ನು ತಲೆಮಾರಿನಿಂದ ತಲೆಮಾರಿಗೆ ಬಾಯಿಯಿಂದ ಬಾಯಿಗೆ ನೆನಪಿನ ವಾಹಕದಲ್ಲಿ ಸೃಜನಶೀಲವಾಗಿ ಕಾಪಾಡಿಕೊಂಡು ಬಂದ ಮೌಖಿಕ ಜಗತ್ತು. ಇದು ಈಗಾಗಲೇ ನಮ್ಮ ನಡುವೆ ಕಣ್ಮರೆಯಾಗುತ್ತಿರುವ ಜಗತ್ತು. ಇನ್ನೊಂದು - ಬದುಕಿನ ಎಲ್ಲ ಜ್ಞಾನಶಾಖೆಗಳ ಮಾಹಿತಿ ಭಂಡಾರವನ್ನೂ ತನ್ನ ಸೂಚ್ಯಂಕದಲ್ಲಿ ದಾಖಲಿಸಿಕೊಳ್ಳುತ್ತಾ, ಮನುಷ್ಯನ ಸೃಜನಶ್ರಮದ ಕಾಲದೀರ್ಘತೆಯನ್ನು ತನ್ನ ಅಣುಕ್ಷಣಗಳ ಹ್ರಸ್ವತೆಗೆ ತಂದಿಟ್ಟುಕೊಂಡು ದೈತ್ಯ ಸಾಧನೆಯನ್ನು ಮೆರೆಯುತ್ತಿರುವ ಗಣಕ ಜಗತ್ತು. ಇದು ದಿನದಿಂದ ದಿನಕ್ಕೆ ಗಣನೆಗೆ ಸಿಗದ ವೇಗದಲ್ಲಿ ಚಲಿಸುತ್ತಿರುವ ಜ್ಞಾನ ಜಗತ್ತು.

ಮೌಖಿಕ ಸೃಜನ ಪ್ರತಿಭೆಯ ಪ್ರತೀಕ ಸಿರಿಯಜ್ಜಿ. ಗಣಕ ಜ್ಞಾನದ ವೇಗದ ಪ್ರತೀಕ ಶಕುಂತಲಾದೇವಿ, ಸಿರಿಯಜ್ಜಿಯದು ಕೇವಲ ನೆನಪಲ್ಲ ; ಅದೊಂದು ಸೃಜನ ಪ್ರತಿಭೆ. ಅದು ಭೂತವಲ್ಲ, ವರ್ತಮಾನ ಪರಂಪರೆಯನ್ನು ಅರಗಿಸಿಕೊಂಡ ಸಮಕಾಲೀನವಾದ ಸೃಜನೆ. ಅದು ಕೇವಲ ವ್ಯಕ್ತಿಯಲ್ಲ, ಅದೊಂದು ಸಮುದಾಯ ಪ್ರಜ್ಞೆ, ಶಕುಂತಲಾದೇವಿಯವರ ಜ್ಞಾನಶಕ್ತಿ ೨ + ೨ = ೪ ರ ಲೆಕ್ಕಾಚಾರದ 'ಅಗಾಧ ನೆನಪಿನ ಕೋಶ. ಇದು ತಾಂತ್ರಿಕ ನೈಪುಣ್ಯತೆ ಹಾಗೂ ಪರಿಕಲ್ಪನೆಗಳ ಅದ್ಭುತ ಸಮೀಕರಣದ ಜ್ಞಾನಶಕ್ತಿ. ಇಲ್ಲಿ ಪರಿಭಾವಿಸಬೇಕಾದ ಬಹು ಮುಖ್ಯ ವಿಚಾರವೆಂದರೆ, ಮೊದಲನೆಯದು ಭಾವಪ್ರಭೆಯ ಸೃಜನೆಯ ಫಲ. ಎರಡನೆಯದು ಬುದ್ಧಿ ಸಂಚಯದ ತರ್ಕದ ಫಲ. ಇಂದು ಈ ಎರಡು ವಾಸ್ತವಗಳ ನಡುವೆ ಅಕ್ಷರಲೋಕದ ಚಲನೆ ಹಲವು ಸವಾಲುಗಳಿಗೆ ಹಲವು ಬಿಕ್ಕಟ್ಟುಗಳಿಗೆ ಮುಖಾಮುಖಿಯಾಗಿದೆ.

ಜ್ಞಾನದ ಶೋಧ ವಿಸ್ತರಣೆಗೊಂಡಂತೆ, ಬಹಳಷ್ಟು ಆತಂಕಗಳು ನಿತ್ಯದ ಭಯಗಳಾಗಿ ನಮ್ಮೆದುರು ಬಿಚ್ಚಿಕೊಳ್ಳುತ್ತಿವೆ. ಮಾಹಿತಿ ತಂತ್ರಜ್ಞಾನದ ವೇಗದಾಳಿಗೆ ಸಿಲುಕಿ ಜಗತ್ತಿನ ಬಹುತೇಕ ಭಾಷೆಗಳು ಕಣ್ಮರೆಯಾಗುವ ಆತಂಕವನ್ನು ಹಲವು ಜನ ಭಾಷಾತಜ್ಞರು ಗಂಭೀರ ಸಮಸ್ಯೆಯಾಗಿ ಜಗತ್ತಿನ ಮುಂದಿಟ್ಟಿದ್ದಾರೆ.

ಈ ಆತಂಕದ ಆವರಣದಲ್ಲಿ ನಮ್ಮ ಕನ್ನಡ ಭಾಷೆಯ ಸ್ಥಿತಿ ಏನು ? ಇದು ನಾವು ಕೇಳಿಕೊಳ್ಳಬೇಕಾದ ಪ್ರಮುಖ ಪ್ರಶ್ನೆ. ಭಾಷೆ ಎಂಬುದು ಕೇವಲ ಸಂವಹನ ಸಂಕೇತವಲ್ಲ, ಅದು ಸಮುದಾಯದ ಸಂಸ್ಕೃತಿ, ನಾಗರಿಕತೆ, ಸೃಜನಶಕ್ತಿ, ಬುದ್ಧಿ ಭಾವಗಳು ಸಂಲಗ್ನಗೊಂಡ ಬದುಕಿನ ಪ್ರತೀಕ. ಅದು ಸಮುದಾಯದ ಉಸಿರು. ಇಂಥ ಭಾಷೆಯ ಅಳಿಯುವಿಕೆ ಎಂದರೆ ಬದುಕಿನ ಎಲ್ಲ ಕ್ಷೇತ್ರಗಳ ಪ್ರಮುಖ ವ್ಯಾವಹಾರಿಕತೆಯಿಂದ ಆ ಭಾಷೆಯನ್ನು ಹೊರಗಿಡುವುದು; ಆಡಳಿತ ಶಿಕ್ಷಣ ಸಂಪರ್ಕಮಾಧ್ಯಮ ಸ್ಥಾನದಿಂದ

ಆ ಭಾಷೆಯನ್ನು ಕಣ್ಮರೆ ಮಾಡುವುದು. ಇದರ ಅರ್ಥ - ಬಹುದೊಡ್ಡ ಭಾಷಿಕ ಸಮುದಾಯವೊಂದನ್ನು ಜ್ಞಾನದ ಬೆಳಕಿನಿಂದ ದೂರವಿಡುವುದು. ಜಾಗತಿಕ ಬದುಕಿನ ಸುಖ ಸವಲತ್ತುಗಳಿಂದ ವಂಚಿಸುವುದು. ಇಂಥ ಹಲವು ಆಘಾತಕಾರೀ ಆತಂಕಗಳ ವಾತಾವರಣದಲ್ಲಿ ಇಂದು ಕನ್ನಡ ಅಕ್ಷರ ಲೋಕ ತನ್ನ ಗತಿಯನ್ನು ಕಂಡುಕೊಳ್ಳಬೇಕಾಗಿದೆ.

ಸಾವಿರಾರು ವರ್ಷಗಳ ಇತಿಹಾಸದಲ್ಲಿ ಸಾಂಸ್ಕೃತಿಕ, ರಾಜಕೀಯ ದಬ್ಬಾಳಿಕೆಯನ್ನು ಸಮರ್ಥವಾಗಿ ಎದುರಿಸಿ ಬೆಳೆದುಬಂದ ಕನ್ನಡ ಭಾಷೆಗೆ, ಕನ್ನಡ ಬದುಕಿಗೆ ಆತಂಕ, ಆಘಾತಗಳು ಮೈಯುಂಡ ಬಾಳು ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತಮತಿಗಳಿಂದ ಮೊದಲ್ಗೊಂಡು ಹಿತಮಿತ ಮೃದುವಚನ, ನುಡಿ, ಟಠಡಢಣ, ಮಾತು ಜ್ಯೋತಿರ್ಲಿಂಗ, ಹಲಗೆ ಬಳಪವ ಪಿಡಿಯದೊಂದಗ್ಗಳಿಕೆಯಲ್ಲಿ ಒಲಿದಂತೆ ಹಾಡಿದ ಹಲವು ಕಾಲದ ಹಲವು ನಿಟ್ಟಿನ ನುಡಿಸಾಧಕರ ಮಾರ್ಗದೇಸಿಗಳ ಸಮಾಹಿತದಲ್ಲಿ ತನಗೆದುರಾದ ಆತಂಕ ಆಘಾತಗಳನ್ನು ಅರಗಿಸಿಕೊಂಡು ಕನ್ನಡದ ದೀಪ ಬೆಳಗಿದೆ. ಇದರರ್ಥ ಆಯಾ ಕಾಲದ ಕನ್ನಡ ಸಮುದಾಯ ತನ್ನ ಕಾಲದ ಸವಾಲುಗಳಿಗೆ ತಕ್ಕ ವಿವೇಕ ತೋರಿ ಸೃಜನಶೀಲವಾಗಿದೆ. ಆದರೆ, ಇಂದಿನ ಆತಂಕ, ಹಿಂದೆಂದಿನ ಅಕ್ರಮಣಗಳಿಗಿಂತ ಭಯಾನಕವಾದುದು. ಈ ಭಯಾನಕತೆಯನ್ನು ಎದುರಿಸುವ ಹಾಗೂ ಆರೋಗ್ಯಕರವಾಗಿ ಅದನ್ನು ಅರಗಿಸಿಕೊಂಡು ಬೆಳೆಯುವ ಸತ್ವಶಕ್ತಿ ಭಾಷೆಗಿದ್ದರೂ, ಭಾಷಿಕ ಸಮುದಾಯದ ಇಚ್ಛಾಶಕ್ತಿಯ ಕೊರತೆ ಎದ್ದುಕಾಣುವ ಸಂಗತಿ. ಈ ಇಚ್ಛಾಶಕ್ತಿ ಹೊರಗಿನಿಂದ ಆಮದು ಮಾಡಿಕೊಳ್ಳುವ ಸರಕಲ್ಲ; ಬದುಕನ್ನು ರೂಪಿಸುವ ಪ್ರಭುತ್ವ ಹಾಗೂ ಪ್ರಭುತ್ವವನ್ನು ಆಯ್ಕೆ ಮಾಡಿಕೊಳ್ಳುವ ಜನಸಮುದಾಯದೊಳಗೆ ಅರಿವೇ ಗುರುವಾಗಿ ಮೂಡಬೇಕಾದ ಪ್ರಜ್ಞಾವಿಶೇಷ ಈ ಪ್ರಜ್ಞಾವಿಶೇಷ ಸಿರಿಯಜ್ಜಿಯ ಸಮುದಾಯವನ್ನು ಕಡೆಗಣಿಸದೆ ಸಮೀಕರಣದ ಜ್ಞಾನಶಕ್ತಿಗೆ ಮಣೆ ಹಾಕಬೇಕಿದೆ.

ಸಾಮಾಜಿಕ ನ್ಯಾಯವನ್ನು ಸಂಸ್ಕೃತಿಯ ರುಚಿ ವಿಶೇಷತೆಯನ್ನು ಪರಿಭಾವನೆಗೆ ತಂದುಕೊಂಡು ಜಂಗಮಶೀಲವಾಗಬೇಕಿದೆ. ಅತಿರೇಕಗಳ ಅವಾಂತರದಿಂದ ಸಮುದಾಯವನ್ನು ಕಾಪಾಡುವ ಶಕ್ತಿ ಅಕ್ಷರ ಲೋಕಕ್ಕಿದೆ. ಅದ್ದರಿಂದ ಅಕ್ಷರಲೋಕ ಸೃಜನಶೀಲತೆಯನ್ನು ಎಚ್ಚರದಿಂದ ಉಳಿಸಿಕೊಳ್ಳುತ್ತಾ, ಜ್ಞಾನದ ಹೊಸ ವಿಸ್ತರಣೆಗೆ ತೆರೆದುಕೊಳ್ಳುವ ಅಗತ್ಯವಿದೆ.

ವಿಜ್ಞಾನದ ಹೊಸ ಹೊಸ ಆವಿಷ್ಕಾರಗಳಿಗೆ ಪ್ರತಿಸ್ಪಂದಿಸುತ್ತಾ ಬೆಳೆಯುವ ಭಾಷೆಯ ಸೃಜನಶೀಲತೆ ಪ್ರಕಾಶಿಸುತ್ತದೆ. ವೈಜ್ಞಾನಿಕ ವಿಚಾರ ಸೃಜನಶೀಲ ಭಾವದಲ್ಲಿ ಅಭಿವ್ಯಕ್ತಗೊಂಡಾಗ ಅದಕ್ಕೊಂದು ಮಾನವೀಯತೆಯ ಪ್ರಭೆ ಪ್ರಾಪ್ತವಾಗುತ್ತದೆ. ಹೊಸಕಾಲದ ಸಂವೇದನೆಗಳಿಗೆ ವೈಜ್ಞಾನಿಕ ವಿಚಾರಗಳಿಗೆ ತಾತ್ವಿಕ ತರ್ಕದೀಪ್ತಿಗಳಿಗೆ ತೆರೆದುಕೊಳ್ಳುವ ನಮ್ಯಗುಣ ಜೀವಂತ ಭಾಷೆಯೊಂದರ ದೊಡ್ಡಶಕ್ತಿ. ಕಾಲದ ಅಗತ್ಯಗಳಿಗೆ ಸ್ಪಂದಿಸಬಲ್ಲ ನಮ್ಯಗುಣ ಕನ್ನಡ ಭಾಷೆಯ ದೊಡ್ಡ ಶಕ್ತಿ. ಜಾಗತಿಕ ಮಟ್ಟದಲ್ಲಿ

ವಿಸ್ತರಣೆಗೊಳ್ಳುತ್ತಿರುವ ಎಲ್ಲ ಜ್ಞಾನಶಾಖೆಗಳ ಪರಿಭಾಷಿಕ ಶಬ್ದ ಸಂಪತ್ತನ್ನು ಸ್ವೀಕರಿಸುತ್ತಾ, ತನ್ನುಟೇಣ ವಿಷಯಜ್ಞಾನವನ್ನು ಅರಗಿಸಿಕೊಂಡು ಕನ್ನಡ ಭಾಷೆ ಬೆಳೆಯಬೇಕಿದೆ. ಕನ್ನಡ ಜ್ಞಾನಚೇತನಗಳ ಇಚ್ಛಾಶಕ್ತಿ ಈ ದಿಸೆಯಲ್ಲಿ ಹೆಚ್ಚು ಕ್ರಿಯಾಶೀಲವಾಗಬೇಕಾದ ಅಗತ್ಯವಿದೆ. ಅಲ್ಲಮನ ಒಂದು ವಚನ ಹೀಗಿದೆ.

ಹಿಂದಣ ಅನಂತವನು ಮುಂದಣ ಅನಂತವನು

ಒಂದು ದಿನ ಒಳಕೊಂಡಿತ್ತು ನೋಡಾ

ಒಂದು ದಿನವನೊಳಕೊಂಡು ಮಾತಾಡುವ ಮಹಾಂತನ

ಕಂಡು ಬಲ್ಲವರಾರಯ್ಯ

ಆದ್ಯರು ವೇದ್ಯರು ಅನಂತ ಹಿರಿಯರು ಕಾಲದಂತುವನರಿಯದೆ

ಅಂತೆ ಹೋದರು ಕಾಣಾ ಗುಹೇಶ್ವರ.

ಜಗತ್ತಿನ ಜ್ಞಾನಕ್ಕೆ ಹಿಂದಣ ಪರಂಪರೆಯ ಅಪಾರತೆ ಇದೆ. ಮುಂದಣ ಭವಿಷ್ಯದ ಅನಂತತೆ ಇದೆ. ವರ್ತಮಾನದಲ್ಲಿ ಈ ಎರಡೂ ಸಂಲಗ್ನಗೊಂಡ ಭಾವದಲ್ಲಿ ಸೃಜನಶೀಲವಾದಾಗ ಅದು ಅಳಿಯದ ಮಾತಾಗುತ್ತದೆ. ಆ ಮಾತು ಜ್ಯೋತಿರ್ಲಿಂಗ ರೂಪಿಯಾಗುತ್ತದೆ. ನಿಜವಾದ ಪುಸ್ತಕಗಳು ಮಾತು ಜ್ಯೋತಿರ್ಲಿಂಗವಾದ ಸಂಸ್ಕೃತಿ ಸಂಚಯದ ಜ್ಞಾನದೀವಿಗೆಗಳು. ಜ್ಞಾನವನ್ನು ಕೇವಲ ಪಂಡಿತಮಾನ್ಯರ ಸ್ವತ್ತಾಗಿಸದೆ, ಜನಸಾಮಾನ್ಯರ ಬದುಕಾಗಿಸುವುದು ಅಕ್ಷರಲೋಕದ ಗುರಿಯಾಗಬೇಕು. ಜ್ಞಾನ ಪರಂಪರೆಗಳನ್ನು ಶೋಧನೆಗೆ ಹಚ್ಚುತ್ತಾ, ಆತ್ಮಾವಲೋಕನದ ಒಳಮುಖೀದರ್ಶನ ದೀಪ್ತಿಯಲ್ಲಿ ಸತ್ಯವನ್ನು ಮನಗಾಣಿಸಬೇಕು. ಕಂಡ ಸತ್ಯದ ಬೆಳಕಿನಲ್ಲಿ ವರ್ತಮಾನದ ದಾರಿ ತೆರೆದು ಭವಿಷ್ಯದ ಮುಂಗಾಣ್ಕೆಯಿಂದ ಗುರಿಯ ಕಡೆ ಹೆಜ್ಜೆ ಹಾಕಬೇಕು. ಇದು ಬದುಕಿನ ಗತಿಶೀಲ ಗುಣವಾದಾಗ ಅತಿರೇಕಗಳಿಗೆ ಅವಕಾಶವಿರುವುದಿಲ್ಲ.

ಇದು ಜಾಗತೀಕರಣದ ಯುಗ. ಈ ಪ್ರಕ್ರಿಯೆಯ ವೇಗ ಅಪರಿಮಿತವಾದಷ್ಟು ಅಪಾಯಕಾರಿಯೂ ಆಗಿದೆ. ಜಾಗತೀಕರಣದ ದಾಳಿಯಲ್ಲಿ ಏಕಸಂಸ್ಕೃತಿ, ಏಕಜೀವನಶೈಲಿ, ಏಕಭಾಷಾಧಿಪತ್ಯಕ್ಕೆ ಜಗತ್ತನ್ನು ಒಳಗುಮಾಡುವುದರಿಂದ ಆಗುವ ದುಷ್ಪರಿಣಾಮವೆಂದರೆ, ಜೀವನ ವೈವಿಧ್ಯತೆಯ ಬಹುಮುಖೀ ಸಂಸ್ಕೃತಿಗಳ ಸಾವು. ಅತಿರೇಕದ ವೈಪರೀತ್ಯಕ್ಕೆ ಒಳಗಾಗಿ ಬದುಕನ್ನು ಬರಡಾಗಿಸುವ ಹಾಗೂ ಅಸಮಾನತೆಯ ಪ್ರಮಾಣವನ್ನು ಅಗಾಧವಾಗಿಸುವ ಅಪಾಯದಿಂದ ಈ ಸಮುದಾಯಗಳನ್ನು ರಕ್ಷಿಸುವ ಅಗತ್ಯ ಇಂದಿನ ತುರ್ತು. ಈ ತುರ್ತಿನ ಸನ್ನಿವೇಶದಲ್ಲಿ ವಿವೇಕದ ದಾರಿ ತೋರಿ ಅತಿರೇಕಕ್ಕೆ ಕಡಿವಾಣವನ್ನು ಹಾಕಿ

ಸಂಸ್ಕೃತಿಯನ್ನು, ಬದುಕನ್ನು ಮಾನವಕೋಟಿಯನ್ನು ಸಂರಕ್ಷಿಸಬಲ್ಲ ಶಕ್ತಿ ಅಕ್ಷರ ಲೋಕಕ್ಕಿದೆ. ಏಕರೂಪೀ ಗುಣದಿಂದ ಕೂಡಿದ ಗಣಕೀಕರಣದ ಏಕಾಧಿಪತ್ಯಕ್ಕಿಂತ ಬಹುರೂಪಿ ಗುಣದ ಪ್ರತಿಭಾ ಸಂಪನ್ನತೆಯಿಂದ ಹೊಳೆದ ಅಕ್ಷರಲೋಕ ಜಗತ್ತಿನ ವೈವಿಧ್ಯತೆಯನ್ನು ಸಂರಕ್ಷಿಸುತ್ತದೆ. ವೈವಿಧ್ಯತೆಗಳೊಳಗಿನ ಸೃಜನಶೀಲತೆಯನ್ನು ಬೆಳೆಸುತ್ತದೆ.

ಪುಸ್ತಕಗಳು ಅಮೂರ್ತವಾದ ಜ್ಞಾನಸಂಪತ್ತನ್ನು ಧಾರಣ ಮಾಡಿಕೊಂಡ ಶಬ್ದರೂಪಗಳು. ಶಬ್ದ ಕೇವಲ ಅರ್ಥದ ಅಭಿದಾವೃತ್ತಿಯಲ್ಲಿ ನೆಲೆ ನಿಲ್ಲುವುದಲ್ಲ, ವ್ಯಂಜನಾ ವ್ಯಾಪಾರದಲ್ಲಿ ಅನುಭಾವಿಕವಾಗುವುದು. ಈ ವ್ಯಂಜನಾ ವ್ಯಾಪಾರ ಬುದ್ಧಿಭಾವಗಳ ವಿದ್ಯುದಾಲಿಂಗನ ಪ್ರಭೆಯ ಫಲಿತ. ಹೀಗಾಗಿ ಪುಸ್ತಕಗಳು ಸಂಸ್ಕೃತಿ ನಾಗರಿಕತೆಗಳ ಸಂಚಯಿತ ಫಲವಾದಷ್ಟೇ ಸಂಸ್ಕೃತಿಯನ್ನು ನಿರಂತರವಾಗಿ ಉಜ್ಜೀವಿಸುವ ಧಾತು ದ್ರವ್ಯಗಳು.

ಕನ್ನಡ ಪುಸ್ತಕ ಪ್ರಾಧಿಕಾರವು ಕರ್ನಾಟಕದಾದ್ಯಂತ ಪುಸ್ತಕ ಸಂಸ್ಕೃತಿಯನ್ನು ಬೆಳೆಸುವ ಸದುದ್ದೇಶದಿಂದ ಪ್ರಾರಂಭವಾದ ಒಂದು ಸಂಸ್ಕೃತಿ ಕೇಂದ್ರ. ವಾಚನಾಭಿರುಚಿಯನ್ನು ಬೆಳೆಸುವುದು ಹಾಗೂ ಪುಸ್ತಕೋದ್ಯಮವನ್ನು ಆರೋಗ್ಯಕರವಾಗಿ ಪೋಷಿಸುವುದು ಪ್ರಾಧಿಕಾರದ ಹೊಣೆಯಾಗಿರುತ್ತದೆ. ಅದಕ್ಕಾಗಿ ಹಲವು ರೀತಿಯ ಕಾರ್ಯಯೋಜನೆಗಳನ್ನು ಪ್ರಾಧಿಕಾರ ರೂಪಿಸಿಕೊಂಡಿದೆ. ಯುವ ಸಮುದಾಯದಲ್ಲಿ ವಾಚನಾಭಿರುಚಿ ಹೆಚ್ಚಿಸಲು ವಾಚನಾಭಿರುಚಿ ಕಮ್ಮಟಗಳನ್ನು ನಡೆಸುತ್ತಿದೆ. ಪ್ರಕಾಶಕರು, ಲೇಖಕರು ಹಾಗೂ ಓದುಗರ ನಡುವೆ ಚಿಂತನಾ ಕಮ್ಮಟಗಳನ್ನು ನಡೆಸುತ್ತಿದೆ. ಇವುಗಳ ಜೊತೆಗೆ ಎರಡನೆಯ ಆದ್ಯತೆಯಾಗಿ ಪುಸ್ತಕ ಪ್ರಕಟಣೆಯ ಜವಾಬ್ದಾರಿಯನ್ನು ನಿರ್ವಹಿಸುತ್ತಿದೆ. ಶೈಕ್ಷಣಿಕ ಶಿಸ್ತಿನಲ್ಲಿ ಅಧ್ಯಯನ ಮಾಡುವ ಪರಾಮರ್ಶನ ಗ್ರಂಥಗಳ ಜೊತೆಗೆ ಜನಸಾಮಾನ್ಯರಿಗೆ ಬೇಕಾದ ಅರಿವನ್ನು ಹಂಚುವ ಪುಸ್ತಕಗಳ ಪ್ರಕಟಣೆಯೂ ಪ್ರಾಧಿಕಾರದ ಉದ್ದೇಶವಾಗಿದೆ.

* * * * * *

ಜೈನಧರ್ಮಕ್ಕೆ ಐದುಸಾವಿರ ವರ್ಷಗಳ ಪ್ರಾಚೀನ ಇತಿಹಾಸವಿದೆ. ತಾನು ಬೋಧಿಸಿದ ಅಹಿಂಸೆ ಅಪರಿಗ್ರಹ ನೀತಿ, ಸಮ್ಯಕ್‌ತತ್ವ ಹಾಗೂ ಅನೇಕಾಂತವಾದಗಳ ಪ್ರತಿಪಾದನೆಯ ಮುಖೇನ ಈ ನೆಲದ ಜೀವನಗತಿಯ ಮೇಲೆ ಅಪಾರ ಪರಿಣಾಮವನ್ನು ಉಂಟುಮಾಡಿದ ಧರ್ಮವಿದು. ಕನ್ನಡ ಸಾಹಿತ್ಯದ ಮಟ್ಟಿಗಂತೂ ಜೈನಧರ್ಮದ ಪ್ರಭಾವ ಪ್ರೇರಣೆಗಳು ನಖಿಮಾಂಸಭಾವದ ನೆಲೆಯವು. ಕನ್ನಡ ನೆಲದಲ್ಲಿ ನಡೆದ ಹಲವು ಧಾರ್ಮಿಕ ಸಂಘರ್ಷಗಳ ಮುಖಾಮುಖಿತ್ವದಲ್ಲಿ ಜೈನಧರ್ಮದ ಏಳುಬೀಳುಗಳು ಕನ್ನಡ ಸಂಸ್ಕೃತಿಯ ಜೀವನೇತಿಹಾಸವನ್ನು ಪ್ರತಿಬಿಂಬಿಸುವುದೇ ಆಗಿದೆ.

ಭಗವಾನ್ ಮಹಾವೀರರ ೨೬೦೦ನೆಯ ಜನಕಲ್ಯಾಣ ಮಹೋತ್ಸವದ ಅಂಗವಾಗಿ ಜೈನಧರ್ಮಕ್ಕೆ ಸಂಬಂಧಿಸಿದ ಕೆಲವು ವಿಚಾರಗಳ ಪುಸ್ತಿಕೆಗಳನ್ನು ಕನ್ನಡ ಪುಸ್ತಕ ಪ್ರಾಧಿಕಾರ ಪ್ರಕಟಿಸುತ್ತಿದೆ. ಸಮಣಸುತ್ತಂ, ಅನೇಕಾಂತವಾದ, ಅಹಿಂಸೆ, ಹೇಮಚಂದ್ರ, ಮಹಾವೀರವಾಣಿ, ಸಾಮ್ರಾಟ್ ಶ್ರೇಣಿಕ ಬಿಂಬಸಾರ, ಮಹಾ ಪುರಾಣ, ಕುಂದಾಕುಂದಾಚಾರ್ಯ, ಚಂದನಾಂಬಿಕೆ-ಇವೇ ಈ ಪುಸ್ತಿಕೆಗಳು. ಧಾರ್ಮಿಕ ವಿಚಾರಗಳು ಕೇವಲ ಪಂಡಿತಮಾನ್ಯರ ಜಿಜ್ಞಾಸೆಯ ವಿಚಾರಗಳಾಗಿ ಮಾತ್ರ ಉಳಿಯದೆ ಶ್ರೀಸಾಮಾನ್ಯರ ಅರಿವಿಗೆ ಅನ್ನವಾಗಬೇಕು ಎಂಬುದು ಇಂಥ ಪ್ರಕಟಣೆಯ ಹಿಂದಿನ ಉದ್ದೇಶ.

ಭಗವಾನ್ ಮಹಾವೀರರ ೨೬೦೦ನೇಯ ಜನಕಲ್ಯಾಣ ಮಹೋತ್ಸವದ ರಾಜ್ಯ ಸಮಿತಿಯ ಅಧ್ಯಕ್ಷರಾದ ಸನ್ಮಾನ್ಯ ಶ್ರೀ ಮಲ್ಲಿಕಾರ್ಜುನ ಖರ್ಗೆಯವರ ಅಪೇಕ್ಷೆಗೆ ಅನುಸಾರವಾಗಿ ಈ ಪ್ರಕಟಕಾರ್ಯ ನಡೆಯುತ್ತಿದೆ. ಸಂಪಾದಕ ಮಂಡಳಿಯವರು ವಿಷಯಗಳ ಆಯ್ಕೆ ಮಾಡಿ, ವಿಷಯತಜ್ಞರಿಂದ ಬರೆಸುವ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಿದ್ದಾರೆ. ಸಂಪಾದಕರಾಗಿ ಡಾ|| ಎಂ.ಎ.ಜಯಚಂದ್ರ ಅವರು ದಕ್ಷತೆಯಿಂದ ಕಾರ್ಯ ನಿರ್ವಹಿಸಿದ್ದಾರೆ. ಈ ಎಲ್ಲ ಮಹನೀಯರಿಗೆ ಕನ್ನಡ ಪುಸ್ತಕ ಪ್ರಾಧಿಕಾರವು ಆತ್ಮೀಯ ಕೃತಜ್ಞತೆಗಳನ್ನು ಸಲ್ಲಿಸುತ್ತದೆ.

ದಿನಾಂಕ : ೮.೯.೨೦೦೫ ಪ್ರೊ| ಎಸ್.ಜಿ. ಸಿದ್ದರಾಮಯ್ಯ

ಸ್ಥಳ : ಬೆಂಗಳೂರು ಅಧ್ಯಕ್ಷರು

## ಸಮಣ ಸುತ್ತಂ

ವೇದಗಳ ಪೂರ್ವದಲ್ಲಿ ಜೈನಧರ್ಮ ಉಚ್ಛ್ರಾಯ ಸ್ಥಿತಿಯಲ್ಲಿತ್ತೆಂದು ವೇದ, ಉಪನಿಷತ್, ಭಾಗವತಗಳಲ್ಲಿ ದೊರೆಯುವ ಉಲ್ಲೇಖಗಳಿಂದ ತಿಳಿದುಬರುತ್ತವೆ. ಐದು ಸಾವಿರ ವರ್ಷಗಳಷ್ಟು ಪ್ರಾಚೀನ ಇತಿಹಾಸವಿರುವ ಜೈನಧರ್ಮ ಅಂದು ಪ್ರತಿಪಾದಿಸಿದ ಅಹಿಂಸೆ, ಅಪರಿಗ್ರಹ, ಅನೇಕಾಂತವಾದ ಮುಂತಾದ ತತ್ವಗಳು ಇಂದಿಗೂ ಆರೋಗ್ಯಕರವಾದ ಸಮಾಜಕ್ಕೆ ಅತ್ಯವಶ್ಯ. ಸಾರ್ವಕಾಲಿಕ ಹಾಗೂ ಸಾರ್ವಭೌಮಿಕವಾದ ಈ ಮಾನವೀಯ ಮೌಲ್ಯಗಳು ಜೈನಧರ್ಮವನ್ನು ಸುದೀರ್ಘಕಾಲ ಜೀವಂತವಾಗಿಡಲು ಕಾರಣವಾಗಿವೆ.

ಐದು ಸಾವಿರ ವರ್ಷಗಳ ಇತಿಹಾಸವುಳ್ಳ ಜೈನಧರ್ಮದಲ್ಲಿ ಇಪ್ಪತ್ತುನಾಲ್ಕು ಮಹಾಪುರುಷರಿಂದ ಕಾಲದಿಂದ ಕಾಲಕ್ಕೆ ಜ್ಞಾನದ ಬೋಧನೆ ಆಗುತ್ತಿತ್ತು ಎಂದು ಉಲ್ಲೇಖಗಳಿಂದ ತಿಳಿದುಬರುತ್ತದೆ. ಆ ಇಪ್ಪತ್ತನಾಲ್ಕು ಮಹಾಪುರುಷರನ್ನು ಜೈನಧರ್ಮೀಯರು ತೀರ್ಥಂಕರರೆಂದು ಮನ್ನಿಸಿ ಪೂಜಿಸುತ್ತಾರೆ. ಅವರಲ್ಲಿ ಅಂತಿಮ ತೀರ್ಥಂಕರರಾದ ಮಹಾವೀರರ ಬೋಧನೆ ಗೌತಮ ಗಣಧರರ ಮುಖೇನ ಶ್ರುತರೂಪದಲ್ಲಿ

ಹರಿಯಿತು. ಹೀಗೆ ಸುಮಾರು ಆರುನೂರು ಐವತ್ತು ವರ್ಷಗಳಷ್ಟು ಕಾಲ ಈ ಜ್ಞಾನವಾಹಿನಿ ಬಾಯಿಂದ ಬಾಯಿಗೆ ಸಾಗತೊಡಗಿತು. ನಂತರ ಮಹಾವೀರರ ಉಪದೇಶ ಲುಪ್ತವಾಗದಂತೆ ಜ್ಞಾನನಿಧಿ ಆಚಾರ್ಯರುಗಳ ಪರಿಶ್ರಮ ಹಾಗೂ ಪ್ರಯತ್ನದಿಂದ ಬರಹರೂಪದಲ್ಲಿ ಸ್ಥಾಪಿತಗೊಂಡಿತು. ಮಹಾವೀರರಿಂದ ಪ್ರಣೀತವಾದ ಜ್ಞಾನಾಮೃತ ಹನ್ನೆರಡು ಅಂಗಗಳಲ್ಲಿ ಸಂಗ್ರಹಗೊಂಡವು.

ಮಹಾವೀರರ ಬೋಧನೆಯಿಂದ ಪ್ರವರ್ತನೆಗೊಂಡ ಜೈನಧರ್ಮ ಕಾಲಸರಿದಂತೆ ಹಲವು ಭಾಗಗಳಾಗಿ ವಿಭಜನೆಗೊಂಡಿತು. ಅವುಗಳಲ್ಲಿ ದಿಗಂಬರ ಸಂಪ್ರದಾಯ ಹಾಗೂ ಶ್ವೇತಾಂಬರ ಸಂಪ್ರದಾಯ ಬಹಳ ಮುಖ್ಯವಾದವು. ಸ್ಥಾನಕವಾಸಿ, ತೇರಾಪಂಥಿ, ಬೀಸ್‌ವಂಥಿ ಹೀಗೆ ಅನೇಕ ಪಂಥಗಳಾಗಿ ವಿಭಜನೆಗೊಂಡವು. ಆಯಾ ಸಂಪ್ರದಾಯದವರು ತಮ್ಮ ಅಭಿಪ್ರಾಯಗಳಿಗೆ ತಕ್ಕಂತೆ ಮಹಾವೀರ ಸ್ವಾಮಿಯ ಬೋಧನೆಗೆ ಟೀಕೆ, ವ್ಯಾಖ್ಯಾನಗಳನ್ನು ಬರೆದರು. ಹೀಗೆ ಭಿನ್ನ ಭಿನ್ನ ಸಂಪ್ರದಾಯಗಳ ಹಲವಾರು ಆಚಾರ್ಯರಿಂದ ಹಲವಾರು ಗ್ರಂಥಗಳು ರಚನೆಗೊಂಡವು.

ಮಹಾವೀರರ ಬೋಧನೆಯಾದ ಅಹಿಂಸಾತತ್ತ್ವ, ಅನೇಕಾಂತವಾದಗಳು ಸಂತ ವಿನೋಬಾಜಿಯವರನ್ನು ಆಕರ್ಷಿಸಿತು. ಜೈನಧರ್ಮದ ಬಗ್ಗೆ ಆದರ ಗೌರವಗಳು ಬೆಳೆದವು. ಒಲುಮೆಯಿಂದ ಪರಿವೀಕ್ಷಿಸಿದಾಗ ಕ್ರೈಸ್ತರಿಗೆ ಬೈಬಲ್, ಮುಸ್ಲಿಮರಿಗೆ ಖುರಾನ್, ಬೌದ್ಧರಿಗೆ ಧಮ್ಮಪದ ಇರುವಂತೆ ಜೈನಧರ್ಮದ ಸಾರವನ್ನು ತಿಳಿಸುವ ಪೂಜನೀಯವಾದ ಗ್ರಂಥವೊಂದು ಇಲ್ಲದಿರುವ ವಾಸ್ತವತೆಯನ್ನು ಮನಗಂಡರು. ಜೈನಧರ್ಮದ ಉತ್ಕೃಷ್ಟ ತತ್ತ್ವಗಳ ಸಾರವನ್ನೊಳಗೊಂಡ ಕೃತಿಯೊಂದು ರಚನೆಯಾಗಬೇಕೆಂದು ಇಚ್ಛಿಸಿದರು. ಕೂಡಲೇ ವಿನೋಬಾಜಿಯವರು ಸಮಸ್ತ ಜೈನಬಾಂಧವರು ತಮ್ಮ ಭಿನ್ನಾಭಿಪ್ರಾಯಗಳನ್ನು ಮರೆತು, ಒಂದೆಡೆ ಕಲೆತು ವಿಚಾರವಿನಿಮಯ ಮಾಡಬೇಕು. ಪರಸ್ಪರ ವಿಚಾರ ವಿನಿಮಯದಿಂದ ಜೈನಧರ್ಮದ ಮೌಲಿಕ ತತ್ತ್ವಗಳನ್ನು ಕ್ರೋಢೀಕರಿಸಿ ಸರ್ವರಿಗೂ ಮಾನ್ಯವಾಗುವಂಥ ಒಂದು ಕೃತಿಯನ್ನು ಹೊರತರಬೇಕೆಂದು ಕರೆ ಇತ್ತರು.

ವಿನೋಬಾಜಿಯವರ ಕರೆಗೆ ಓಗೊಟ್ಟು ಆ ಮಹಾ ಕಾರ್ಯಭಾರವನ್ನು ಹೊತ್ತವರು ಜಿನೇಂದ್ರ ವರ್ಣೀಜಿಯವರು. ಅಗಾಧವಾದ ಪಾಂಡಿತ್ಯವುಳ್ಳ ವರ್ಣೀಜಿಯವರು ಅತ್ಯಂತ ಶ್ರದ್ಧೆ ಹಾಗೂ ಶ್ರಮದಿಂದ ಪ್ರಾಚೀನ ಆಗಮಗ್ರಂಥಗಳಿಂದ ಗಾಹೆಗಳನ್ನು ಆಯ್ದು ಜೈನಧರ್ಮಸಾರ ಎಂಬ ಕೃತಿಯನ್ನು ಸಿದ್ಧಗೊಳಿಸಿದರು. ಆ ಕೃತಿಯನ್ನು ಪರಿಶೀಲಿಸಿ ಅಭಿಪ್ರಾಯ ತಿಳಿಸಲು ವಿವಿಧ ಪಂಥದ ಮುನಿಗಳಿಗೆ ಹಾಗೂ ವಿದ್ವಾಂಸರಿಗೆ ಸಾವಿರಾರು ಪ್ರತಿಗಳನ್ನು ಕಳುಹಿಸಿದರು. ಮುನಿಗಳ ಹಾಗೂ ವಿದ್ವಜ್ಜನರ ಸಲಹೆ-ಸೂಚನೆ ಮೇರೆಗೆ ಹಲವು ಗಾಹೆಗಳನ್ನು ತೆಗೆದು ಮತ್ತೆ ಕೆಲವನ್ನು ಸೇರಿಸಿ ಮತ್ತೊಂದು ಕೃತಿಯನ್ನು ಸಿದ್ಧಗೊಳಿಸಿದರು. ಹೀಗೆ ಪರಿಷ್ಕೃತಗೊಂಡ ಹೊತ್ತಿಗೆ, ಜಿಣಧಮ್ಮ ಎಂಬ ಹೆಸರಿನಿಂದ ಪ್ರಕಟಗೊಂಡಿತು.

ಹೀಗೆ ಪ್ರಕಟಗೊಂಡ 'ಜಿಣಧಮ್ಮ'ದ ಅಂತಿಮ ಹಂತದ ಪರಿಷ್ಕರಣೆಗಾಗಿ ಮತ್ತೆ ನಾಲ್ಕು ದಿನಗಳ ಕಾಲದ ಐತಿಹಾಸಿಕ ಅಧಿವೇಶನವೊಂದು ಏರ್ಪಾಡಾಯಿತು.

ವಿವಿಧ ಪಂಥದ ಆಚಾರ್ಯರು, ಮುನಿಗಳು ಮುನ್ನೂರಕ್ಕು ಹೆಚ್ಚಿನ ವಿದ್ವಾಂಸರು ದೆಹಲಿಯಲ್ಲಿ ಸಭೆ ಸೇರಿದರು. ಮುನಿಶ್ರೀ ಸುಶೀಲ್‌ಕುಮಾರ್ ದಜೀ, ಮುನಿಶ್ರೀ ನಥಮಲಜೀ, ಮುನಿಶ್ರೀ ಜನಕ ವಿಜಯಜೀ ಹಾಗೂ ಮುನಿಶ್ರೀ ವಿದ್ಯಾನಂದಜೀ ಅವರ ಅಧ್ಯಕ್ಷತೆಯಲ್ಲಿ ಸಭಾ ಕಾರ್ಯಕ್ರಮ ನಡೆಯಿತು. ಆಚಾರ್ಯರಾದ ತುಲಸೀಜಿ, ಧರ್ಮಸಾಗರಜೀ, ವಿಜಯಸಮುದ್ರಜೀ ಅವರು ಸಭೆಯಲ್ಲಿ ಉಪಸ್ಥಿತರಿದ್ದರು. ಪವಿತ್ರವೆಂದು ಮನ್ನಿಸುವ ನೂರೆಂಟು ಸಂಖ್ಯೆಯನ್ನು ಹಾಗೂ ಜೈನರಿಗೆ ಪ್ರಿಯವಾದ ಏಳರ ಸಂಖ್ಯೆಯಿಂದ ಗುಣಿಸಿದರೆ ಏಳುನೂರು ಐವತ್ತಾರು ಬರುವುದು. ಆ ಸಂಖ್ಯೆಯ ಗಾಹೆಗಳು ಗ್ರಂಥದಲ್ಲಿ ಸಂಕಲನಗೊಳ್ಳಬೇಕೆಂದು ಒಮ್ಮತದಿಂದ ತೀರ್ಮಾನವಾಯಿತು.

ಕೃತಿಯ ಹೆಸರಿನ ಬಗ್ಗೆ ಚರ್ಚಿತವಾದಾಗ ಅಂದಿನ ಆಡುಭಾಷೆಯಾದ ಅರ್ಧ ಮಾಗಧಿಯಲ್ಲಿರಬೇಕೆಂದು ನಿರ್ಧಾರವಾದಾಗ ಗ್ರಂಥದ ಶಿರೋನಾಮೆ ಸಮಣ ಸುತ್ತಂ ಎಂದು ಸರ್ವರ ಅಭಿಮತದಿಂದ ಒಪ್ಪಿತವಾಯಿತು. ಸಮಣ ಎಂದರೆ ಶ್ರಮಣ. 'ಶ್ರಮಣ' ಎಂಬ ಶಬ್ದ ಆತ್ಮಕಲ್ಯಾಣಕ್ಕಾಗಿ ಶ್ರಮಿಸುವ ಮುನಿಗಳು ಹಾಗೂ ಆದರ್ಶ ಶ್ರಾವಕರನ್ನು ಸೂಚಿಸುತ್ತದೆ. 'ಸುತ್ತಂ' ಎಂದರೆ ಸೂಕ್ತಿ. (ಸು + ಉಕ್ತಿ = ಒಳ್ಳೆಯ ಮಾತು). ಇಲ್ಲಿ ಜನಹಿತ ಕಲ್ಯಾಣವೇ ಪರಮಗುರಿ.

“ಸಮಣ ಸುತ್ತಂ' ಏಳುನೂರು ಐವತ್ತಾರು ಗಾಹೆಗಳುಳ್ಳ ಸಂಕಲಿತ ಕೃತಿ. ಪ್ರಾಚೀನ ಆಗಮ ಗ್ರಂಥಗಳಿಂದ ಆಯ್ದ ಗಾಹೆಗಳನ್ನು ಅಡಕಗೊಳಿಸಿದ್ದಾರೆ. ಕೃತಿಯಲ್ಲಿರುವ ಗಾಹೆಗಳು ಅಂದಿನ ಆಡುಭಾಷೆಯಿಂದ ಪ್ರಾಕೃತ ಭಾಷೆಯಲ್ಲಿದೆ. ಸಾಧ್ಯವಾದಷ್ಟು ಭಗವಾನ್ ಮಹಾವೀರರ ಆಶಯಕ್ಕೆ ಹತ್ತಿರವಾದುದಾಗಿವೆ.

ಜೀವಿಯ ಹುಟ್ಟು-ಸಾವು, ಭವಭ್ರಮಣೆ, ಸುಖದುಃಖಗಳ ಅನುಭವ, ಆತ್ಮ, ಧ್ಯಾನ, ತಪ, ಸ್ಯಾದ್ವಾದ, ಸಲ್ಲೇಖನ, ಅನೇಕಾಂತವಾದ - ಹೀಗೆ ಜೈನದರ್ಶನದ ಅನೇಕ ವಿಚಾರಗಳನ್ನು ತಿಳಿಸುವ ಗಾಹೆಗಳು ನಿರೂಪಿತವಾಗಿವೆ.

'ಸಮಣ ಸುತ್ತಂ'ನಲ್ಲಿ ನಾಲ್ಕು ಪ್ರಮುಖ ಭಾಗಗಳಿವೆ. (೧) ಜ್ಯೋತಿರ್ಮುಖ (೨) ಮೋಕ್ಷಮಾರ್ಗ (೩) ತತ್ವದರ್ಶನ (೪) ಸ್ಯಾದ್ವಾದ.

ಈ ನಾಲ್ಕು ಖಂಡಗಳನ್ನು ಮತ್ತೆ ವಿಷಯಾನುಸಾರ ನಲವತ್ತನಾಲ್ಕು - ಪ್ರಕರಣಗಳನ್ನಾಗಿ ವಿಂಗಡಿಸಿದ್ದಾರೆ.

## ೧. ಜ್ಯೋತಿರ್ಮುಖ ಖಂಡ

ಪ್ರಥಮ ಖಂಡವಾದ ಜ್ಯೋತಿರ್ಮುಖದಲ್ಲಿ ವಿಷಯಾನುಸಾರ ಮತ್ತೆ ಹದಿನೈದು ಪ್ರಕರಣಗಳಾಗಿ ವಿಭಜಿತಗೊಂಡಿದೆ. ಭೋಗಾಸಕ್ತ ಬಾಹ್ಯ ಜೀವನದಿಂದ ಹೊರತಾದ ಅಭ್ಯಂತರ ಜೀವನ ದರ್ಶನ ಹೇಗಿರಬೇಕೆಂದು ಸ್ಥೂಲವಾಗಿ ವಿವೇಚಿಸುವ ಗಾಹೆಗಳ ಸಂಗ್ರಹವಿದೆ. ಕ್ಷಣಿಕ ಸುಖ ನೀಡುವ ವಿಷಯಾಸಕ್ತಿ ಹಾಗೂ ಇಂದ್ರಿಯ ಸುಖಗಳು ಕರ್ಮಬಂಧಕ್ಕೆ ಕಾರಣವಾಗಿ ಸಂಸಾರ ಚಕ್ರದಲ್ಲಿ ತಿರುಗಲು ಕಾರಣವಾಗುವುದು. ಪರಮ ಶತ್ರುಗಳಂತೆ ಪೀಡಿಸುವ ರಾಗದ್ವೇಷಗಳಿಂದ ಮುಕ್ತನಾಗುವ ಬಗೆ, ಕ್ರೋಧ, ಮಾನ ಮುಂತಾದ ಕಷಾಯಗಳಿಂದ ವಿಮುಕ್ತನಾಗಿ ಕ್ಷಮಾದಿ ಗುಣಗಳ ಚಿಂತನೆ, ಅಪರಿಗ್ರಹ ತತ್ವ, ಸ್ವಪರಗಳ ಭೇದಜ್ಞಾನ ಹೀಗೆ ಅನೇಕ ಜೈನದರ್ಶನದ ಚಿಂತನೆಗಳುಳ್ಳ ಗಾಹೆಗಳು ಇಲ್ಲಿ ಸಂಕಲಿತಗೊಂಡಿವೆ.

## ಮಂಗಲಸೂತ್ರ :

ಣಮೋ ಅರಹಂತಾಣಂ| ಣಮೋ ಸಿದ್ಧಾಣಂ| ಣಮೋ ಆಯಾರಿಯಾಣಂ

ಣಮೋ ಉವಜ್ಝಾಯಾಣಂ| ಣಮೋ ಲೋಏ ಸವ್ವಸಾಹೂಣಂ||

ಮೇಲೆ ಉದ್ಧೃತವಾದ ಸ್ತವನ ಪಂಚನಮಸ್ಕಾರಗಳೆಂದೇ ಸುಪ್ರಸಿದ್ಧವಾದುದು, ಸರ್ವ ಪಂಗಡದ ಜೈನಧರ್ಮೀಯರಿಗೂ, ಸರ್ವಕಾಲಕ್ಕೂ ಆದರಣೀಯವಾದ, ಪೂಜನೀಯ ಪಂಚನಮಸ್ಕಾರ ಮಂತ್ರದಿಂದ ಕೃತಿ ಆರಂಭವಾಗಿದೆ. ಈ ಪಂಚನಮಸ್ಕಾರಗಳು ಎಲ್ಲ ಪಾಪಗಳನ್ನು ನಾಶ ಮಾಡುವಂಥದು ಎಂದು ಸ್ತುತಿಸಿ ಲೋಕದಲ್ಲಿ ಪ್ರಸಿದ್ಧವಾದ 'ಚತ್ತಾರಿ ಮಂಗಲ'ಗಳ ಸ್ತವನ ಮಾಡಿದ್ದಾರೆ. ಅರಹಂತ, ಸಿದ್ಧ, ಸಾಧು ಹಾಗೂ ಕೇವಲಿಗಳು ಬೋಧಿಸಿದ ಧರ್ಮಗಳು ಸರ್ವರಿಗೂ ಆಶ್ರಯದಾತವಾಗಲಿ ಎಂದು ಸ್ತುತಿ ಮಾಡಿದ್ದಾರೆ. ನಂತರ ವರ್ತಮಾನಕಾಲದ ಇಪ್ಪತ್ತುನಾಲ್ಕು ತೀರ್ಥಂಕರರಿಗೆ ವಂದಿಸಿ, 'ಸಿದ್ಧಾಃ ಸಿದ್ಧಿ ಮಮ ದಿಶಂತು' (ಸಿದ್ಧ ಭಗವಾನರು ಸಿದ್ಧಿಯನ್ನು ಕರುಣಿಸಲಿ) ಎಂದು ಸಿದ್ಧರ ಸ್ಮರಣೆಯೊಂದಿಗೆ ಕೃತಿ ಆರಂಭವಾಗುತ್ತದೆ.

## ಜಿನಶಾಸನ ಸೂತ್ರ:

ಸಂಸಾರದಲ್ಲಿ ಲಿಪ್ತನಾದ ಜೀವ ಭವಸಾಗರವನ್ನು ದಾಟಲು ಜಿನೇಂದ್ರರ ಬೋಧನೆಯೊಂದೆ ಆಶ್ರಯತಾಣ. ಅವರ ಉಪದೇಶದ ಪ್ರಭಾವದಿಂದ ಸಂಸಾರದಿಂದ ವಿರತಿ ಹೊಂದಿ ಮೋಕ್ಷ ಮಾರ್ಗದಲ್ಲಿ ಹೆಜ್ಜೆಯಿಡಬಹುದು. ಸ್ವಸಮಯ ಪರಸಮಯಗಳ ಜ್ಞಾತಾರರಾದ ಜಿನರ ಬೋಧನೆ ಜನ್ಮ, ಜರಾ, ಮುಪ್ಪು, ಮೃತ್ಯುಗಳೆಂಬ ರೋಗಗಳಿಗೆ ಅಮೃತ ಸಮಾನವಾದ ಔಷಧವಿದ್ದಂತೆ.

## ಸಂಘಸೂತ್ರ :

ಸಮ್ಯಕ್ತ್ವ ಸಹಿತವಾದ ದರ್ಶನ, ಜ್ಞಾನ, ಚಾರಿತ್ರಗಳ ಸಮನ್ವಯವೇ ಸಂಘ. 'ಸಂಘೋ ಯ ವಿಮೋಚಓ ಯ ಕಮ್ಮಾಣಂ' ಸಂಘದಿಂದ ಕರ್ಮ ವಿಮೋಚನೆಯಾಗುವುದು. ಮೋಕ್ಷಕ್ಕೆ ಹೆದ್ದಾರಿ ಆಗುವುದು. ಸಂಘವು ಭೀತರಿಗೆ ಅಭಯವನ್ನು ಸಂತ್ರಸ್ತರಿಗೆ ಸಮಾಧಾನವನ್ನು ಹೇಳುವುದು. ಸರ್ವರಲ್ಲೂ ಸಮತಾಭಾವ ತೋರುವುದರಿಂದ ತಾಯಿತಂದೆಯರಂತೆ ಸಕಲ ಜೀವರಾಶಿಗಳಿಗೂ ಆಶ್ರಯದಾತವಾಗುವುದು. ಸಂಘವನ್ನು ಕಮಲ ಪುಷ್ಪಕ್ಕೆ ಶ್ರಾವಕರನ್ನು ಮಧುವನ್ನು ಹೀರುವ ದುಂಬಿಗೆ ಹೋಲಿಸಿದ್ದಾರೆ.

## ನಿರೂಪಣ ಸೂತ್ರ:

ಈ ಸೂತ್ರದಲ್ಲಿ ಜೀವಾದಿ ತತ್ವಗಳನ್ನು ಅರಿಯಲು ಅವಶ್ಯವಾದ ಪ್ರಮಾಣ - ನಯ - ನಿಕ್ಷೇಪಗಳ ಸ್ಥೂಲ ವಿವರಣೆ ಇದೆ. ನಯದ ಭೇದಗಳಾದ ವ್ಯವಹಾರ ನಯ ಹಾಗೂ ನಿಶ್ಚಯನಯಗಳು ಪರಸ್ಪರ ಸಾಪೇಕ್ಷ ಹೊಂದಿದರೆ ಸಮ್ಯಕ್ತ್ವ ಭಾವ ಪ್ರಾಪ್ತವಾಗುವುದು.

## ಸಂಸಾರ ಚಕ್ರ ಸೂತ್ರ:

ಸಂಸಾರದ ಅನಿತ್ಯತೆ, ಅಸ್ಥಿರತೆ, ಅಸಾರತೆಯ ಚಿತ್ರಣವಿದೆ. ಸಂಸಾರದಲ್ಲಿ ಲಭ್ಯವಾಗುವ ಕಾಮ ಭೋಗ ಸುಖಗಳು ಶಾಶ್ವತವಲ್ಲ, ಕ್ಷಣಭಂಗುರವಾದುದು. ಅಂತ್ಯದಲ್ಲಿ ದುಃಖವನ್ನು ತರುವಂಥದಾದುದರಿಂದ ಸಂಸಾರ ಸುಖದಿಂದ ದೂರವಿರಲು ಪ್ರಯತ್ನಿಸಬೇಕು.

## ಕರ್ಮಸೂತ್ರ :

ಜೀವಿಯ ಭಾವನೆಗನುಸಾರವಾಗಿ ಶುಭಾಶುಭ ಕರ್ಮಗಳು ಬಂಧಿತವಾಗುತ್ತವೆ. ಬಂಧವಾದ ಕರ್ಮದ ಫಲವನ್ನು ಅವನೇ ಭೋಗಿಸಬೇಕಾಗುತ್ತದೆ. "ಕಮ್ಮಂ ಚಿಣಂತಿ ಸವಸಾ, ತಸ್ಸುದಯಮ್ಮಿ ಉ ಪರವ್ವಸಾ ಹೊಂತಿ'. (ಜೀವಿ ಕರ್ಮ ಮಾಡಲು ಸ್ವತಂತ್ರ. ಆದರೆ ಅದು ಉದಯಕ್ಕೆ ಬಂದಾಗ ಪರಾಧೀನನಾಗುತ್ತಾನೆ.) ಅವನ ಕರ್ಮದ ಫಲವನ್ನು ಜ್ಞಾತಿ, ಮಿತ್ರ, ಪುತ್ರ, ಬಾಂಧವರು ಯಾರು ಹಂಚಿಕೊಳ್ಳಲಾರರು. ಸ್ವಯಂ ಅವನೇ ಅದರ ಫಲವನ್ನು ಅನುಭವಿಸಬೇಕು ಎಂಬ ವಾಸ್ತವ ಸತ್ಯದರ್ಶನದ ಅರಿವಾಗುತ್ತದೆ.

## ಮಿಥ್ಯಾತ್ವಸೂತ್ರ :

ತೀವ್ರ ಕಷಾಯಗಳಿಂದ ಆವೃತವಾದ ಜೀವಿ ಆತ್ಮ ಹಾಗೂ ಶರೀರ ಒಂದೇ ಎಂದು ಭಾವಿಸುವ ಮೂಢಮತಿಯಾಗುತ್ತಾನೆ ; ಮಿಥ್ಯಾದೃಷ್ಟಿ, ಮಿಥ್ಯಾತ್ವದಿಂದ ಗ್ರಸ್ತನಾದ ಜೀವಿಗೆ ಎಂದೂ ಧರ್ಮ ರುಚಿಸುವುದಿಲ್ಲ.

## ರಾಗ ಪರಿಹಾರ ಸೂತ್ರ :

ಕರ್ಮ ಸಂಚಯಕ್ಕೆ ರಾಗದ್ವೇಷಗಳೇ ಮೂಲ ಕಾರಣ. ಅತ್ಯಂತ ಹೀನಾಯವಾದ ಶತ್ರು ಕೂಡ ಮಾಡದಂಥ ಹಾನಿ ಮಾಡುತ್ತದೆ. ಚಾರಿತ್ರಾದಿ ಗುಣಗಳನ್ನು ನಾಶ ಮಾಡುವ ರಾಗದ್ವೇಷರೂಪಿ ಪಾಪಗಳಿಗೆ ವಶವಾಗದೆ ಇದ್ದರೆ ಅವನ ಮನದಲ್ಲಿ ಸಮತಾಭಾವ ಉತ್ಪನ್ನವಾಗುತ್ತದೆ. ದುಃಖಕ್ಕೆ ಕಾರಣವಾದ ಸಂಸಾರವನ್ನು ಹೇಯವೆಂದು ಭಾವಿಸಬೇಕು.

## ಧರ್ಮಸೂತ್ರ:

ಧಮ್ಮೋ ಮಂಗಲಮುಕ್ಕಿಟ್ಠಂ ಅಹಿಂಸಾ ಸಂಜಮೋ ತವೋ |

ದೇವಾ ವಿತಂ ನಮಂಸಂತಿ ಜಸ್ಸಧಮ್ಮೇ ಸಯಾ ಮಣೋ ||

(ಧರ್ಮವು ಉತ್ಕೃಷ್ಟ ಮಂಗಲ, ಅಹಿಂಸಾ, ಸಂಯಮ, ತಪ ಅದರ ಲಕ್ಷಣಗಳು. ಯಾರ ಮನದಲ್ಲಿ ಸದಾ ಧರ್ಮ ರಮಿಸುತ್ತದೋ, ಅಂಥವರಿಗೆ ದೇವತೆಗಳು ನಮಸ್ಕರಿಸುತ್ತಾರೆ.)

ಮೇಲಿನ ಗಾಹೆಯಿಂದ ಧರ್ಮಕ್ಕಿರುವ ಶ್ರೇಷ್ಠಸ್ಥಾನದ ಅರಿವಾಗುತ್ತದೆ. ಈ ಸೂತ್ರ ವಿಭಾಗದಲ್ಲಿ ಧರ್ಮದ ದಶಲಕ್ಷಣಗಳಾದ ಕ್ಷಮಾದಿ ಗುಣಗಳ ಎಸ್ತೃತ ವಿವರಣೆಯಿದೆ. ಅವುಗಳಲ್ಲಿ ಒಂದು ಸುಪ್ರಸಿದ್ಧ ಗಾಹೆ ಹೀಗಿದೆ -

ಖಮ್ಮಾಮಿ ಸವ್ವಜೀವಾಣಂ, ಸವ್ವೇ ಜೀವಾ ಖಮಂತು ಮೇ |

ಮಿತ್ತೀ ಮೇ ಸವ್ವಭೂದೇಸು, ವೇರಂ ಮಜ್ಝಂ ಣ ಕೇಣವಿ ||

ನಾನು ಎಲ್ಲ ಜೀವಿಗಳನ್ನು ಕ್ಷಮಿಸುತ್ತೇನೆ. ಎಲ್ಲ ಜೀವಿಗಳು ನನ್ನನ್ನು ಕ್ಷಮಿಸಲಿ. ನನಗೆ ಎಲ್ಲ ಪ್ರಾಣಿಗಳಲ್ಲಿ ಮೈತ್ರಿಯಿದೆ. ನನಗೆ ಯಾರಲ್ಲಿಯೂ ವೈರವಿಲ್ಲ.

## ಸಂಯಮ ಸೂತ್ರ :

ರಾಗದ್ವೇಷಗಳನ್ನು ತ್ಯಜಿಸಿ, ಇಂದ್ರಿಯ ಹಾಗೂ ಕಷಾಯಗಳ ನಿಗ್ರಹ ಮಾಡಿದಾಗಲೆ ಸಂಯಮ ಸಾಧಿತವಾಗುವುದು. ಜ್ಞಾನ, ಧ್ಯಾನ, ತಪೋಬಲವೆಂಬ ಕಡಿವಾಣದಿಂದ ಸ್ವಯಂ ತನ್ನ ಮೇಲೆ ವಿಜಯ ಸಾಧಿಸುವುದರಿಂದ ಇಹ-ಪರಗಳೆರಡರಲ್ಲಿ ಸುಖ ಲಭ್ಯವಾಗುವುದು.

## ಅಪರಿಗ್ರಹ ಸೂತ್ರ :

ಹಿಂಸೆ, ಸುಳ್ಳು, ಕಳ್ಳತನ, ಹಾದರ, ಲಾಲಸೆ ಮುಂತಾದ ಪಂಚ ಪಾಪಗಳಿಗೆ ಮೂಲ ಕಾರಣ ಪರಿಗ್ರಹ. ಪರಿಗ್ರಹವೇ- ಅತಿಸಂಗ್ರಹವೇ ದುಃಖಕ್ಕೆ ಕಾರಣವಾಗುವುದು. ಆನೆಯನ್ನು ಹತೋಟಿಯಲ್ಲಿಡಲು ಅಂಕುಶ ಇರುವಂತೆ ಇಂದ್ರಿಯ ಲಾಲಸೆಯನ್ನು ನಿಗ್ರಹಿಸಲು ಪರಿಗ್ರಹದ ತ್ಯಾಗವನ್ನು ಮಾಡಬೇಕು.

## ಅಹಿಂಸಾ ಸೂತ್ರ :

ಆಕಾಶಕ್ಕಿಂತ ವಿಶಾಲವಾದ ವಸ್ತು ಮತ್ತೊಂದಿಲ್ಲ ಎನ್ನುವ ಹಾಗೆ ಅಹಿಂಸೆಗೆ ಸಮಾನವಾದ ಮತ್ತೊಂದು ಧರ್ಮವಿಲ್ಲ ಎಂದು ಅಹಿಂಸೆಯ ಮಹತ್ವವನ್ನು ಹೇಳಿದ್ದಾರೆ.

'ಸವ್ವೇ ಜೀವಾ ವಿ ಇಚ್ಛಂತಿ ಜೀವಿಉಂ ನ ಮರಿಜ್ಜಿ ಉಂ' (ಸಕಲ ಪ್ರಾಣಿಗಳು ಬದುಕಲು ಬಯಸುತ್ತವೆ. ಸಾಯಲು ಅಲ್ಲ). ಯಾವ ಜೀವಿಗೂ ದುಃಖ ಪ್ರಿಯವಾದುದಲ್ಲ ಎಂದು ತಿಳಿದು ಸಕಲ ಜೀವಿಗಳ ಮೇಲೆ ದಯೆ ಇಡಬೇಕು. ಯಾವುದನ್ನು ಹಿಂಸಿಸಬಾರದು. ಅಪ್ರಮತ್ತನು ಸದಾ ಅಹಿಂಸಕನಾಗಿರುತ್ತಾನೆ.

## ಅಪ್ರಮಾದ ಸೂತ್ರ :

ಕಷಾಯರಹಿತನಾದ ಅಪ್ರಮಾದನು ಹರಿದು ಬರುವ ಕರ್ಮವನ್ನು ತಡೆದು, ಸಂಚಿತವಾದ ಕರ್ಮವನ್ನು ನಿರ್ಜರೆಗೊಳಿಸುತ್ತಾನೆ. ಅಪ್ರಮತ್ತರು ಜ್ಞಾನಿಗಳು ಹಾಗೂ ದಯಾಪರರಾಗಿದ್ದರೆ, ಪ್ರಮತ್ತರು ಅಜ್ಞಾನಿಗಳಾಗಿ ಕರ್ಮದ ಆಸ್ರವಕ್ಕೆ ಕಾರಣರಾಗುತ್ತಾರೆ. ಇದರಿಂದ ಸಂಸಾರ ಚಕ್ರದಲ್ಲಿ ತಿರುಗುತ್ತಲೇ ಇರುತ್ತಾರೆ. ಆದಕ್ಕೆ ಮಹಾವೀರ ಸ್ವಾಮಿ ಹೇಳುತ್ತಾರೆ-

ಜಾಗರಿಯ ಧಮ್ಮೀಣಂ ಅಹಮ್ಮೀಣಂ ಚ ಸುತ್ತಯ ಸೇಯ

(ಧಾರ್ಮಿಕರು ಎಚ್ಚರವಾಗಿದ್ದರೆ ಶ್ರೇಯಸ್ಕರ. ಅಧಾರ್ಮಿಕರು ಮಲಗಿರುವುದು ಶ್ರೇಯಸ್ಕರ). ಧಾರ್ಮಿಕರು ಜಾಗ್ರುತರಾಗಿದ್ದರೆ ಸಂಚಿತ ಕರ್ಮವನ್ನು ನಿರ್ಜರಗೊಳಿಸಿ ಮೋಕ್ಷದ ಹಾದಿಯತ್ತಗಮಿಸುವರು.

## ಶಿಕ್ಷಾಸೂತ್ರ :

ಅಧ್ಯಯನದಿಂದ ಜ್ಞಾನ ಹಾಗೂ ಏಕಾಗ್ರತೆ ಪ್ರಾಪ್ತವಾಗಿ ಧರ್ಮದಲ್ಲಿ ಸ್ಥಿರವಾಗುವನು. ಇತರರೂ ಧರ್ಮದಲ್ಲಿ ಸ್ಥಿರವಾಗಿರುವಂತೆ ಮಾಡುವನು ಎಂದು ಹೇಳಿದ್ದಾರೆ. ವಿನಯವಂತನಿಗೆ ಶಿಕ್ಷಾ(ಶಿಕ್ಷಣ) ಲಭ್ಯವಾಗುತ್ತದೆ. ಒಂದು ದೀಪದಿಂದ ನೂರಾರು ದೀಪ ಬೆಳಗುವಂತೆ ಜ್ಯೋತಿ ಸಮಾನರಾದ ಆಚಾರ್ಯರಿಂದ ಶಿಷ್ಯರು ಪ್ರಜ್ವಲಿಸುವರು.

## ಆತ್ಮಸೂತ್ರ:

ಆತ್ಮವು ಉತ್ತಮ ಗುಣಗಳ ಆಶ್ರಯ ತಾಣ. ದ್ರವ್ಯಗಳಲ್ಲಿ ಉತ್ತಮ ದ್ರವ್ಯ ಹಾಗೂ ತತ್ವಗಳಲ್ಲಿ ಉತ್ಕೃಷ್ಟವಾದುದು ಆತ್ಮತತ್ವ. ಆತ್ಮನನ್ನು ಮೂರು ಪ್ರಕಾರಗಳಲ್ಲಿ ಗುರುತಿಸುತ್ತಾರೆ.

೧. ಬಹಿರಾತ್ಮ. ೨. ಅಂತರಾತ್ಮ. ೩. ಪರಮಾತ್ಮ.

ಇಂದ್ರಿಯ ಸಮೂಹ ಶರೀರವನ್ನು ಆತ್ಮದ ರೂಪದಲ್ಲಿ ಸ್ವೀಕರಿಸುವುದು ಬಹಿರಾತ್ಮ. ಶರೀರದಿಂದ ಬೇರೆಯಾದುದು ಆತ್ಮವೆಂದು ಹೇಳುವುದು ಅಂತರಾತ್ಮ. ಕರ್ಮ ಕಳಂಕದಿಂದ ಮುಕ್ತನಾದ ಆತ್ಮನೇ ಪರಮಾತ್ಮ. ಮನ ವಚನ ಕಾಯಗಳಿಂದ ಶರೀರ ಬೇರೆ ಆತ್ಮ ಬೇರೆ ಎಂದು ಚಿಂತನೆ ಮಾಡಿದಾಗ ಕರ್ಮ

ನಿರ್ಜರೆಯಾಗಿ ಜೀವ ಪರಮಾತ್ಮನಾಗುವುದು. ಶುದ್ಧಾತ್ಮನಿಗೆ ಭವಬಂಧನವಿಲ್ಲ. ಚತುರ್ಗತಿಗಳ ಪರಿಭ್ರಮಣೆಯಿಂದ ವಿಮುಕ್ತನಾದ ಅವನು 'ಣಿದ್ಧಂಡೋ ಣಿದ್ದಂದೋ, ಣ್ಮಿಮ್ಮೋ, ಣಿಕ್ಕಲೋ, ಣಿರಾಲಂಬೋ' (ನಿರ್ದಂಡ, ನಿರ್ದಂಧ್ವ, ನಿರ್ಮಮ, ನಿಷ್ಕಲ, ನಿರಾಲಂಬ) ಎಂದು ಆಗಮ ಗ್ರಂಥಗಳಲ್ಲಿ ಉಲ್ಲೇಖಿತವಾಗಿದೆ.

## ೨. ಮೋಕ್ಷ ಮಾರ್ಗ ಖಂಡ

ದ್ವಿತೀಯ ಖಂಡವಾದ ಮೋಕ್ಷಮಾರ್ಗದಲ್ಲಿ ಹದಿನೆಂಟು ಪ್ರಕರಣಗಳಿವೆ. ಜೈನದರ್ಶನದ ಪ್ರಮುಖ ಚಿಂತನೆಗಳಾದ ರತ್ನತ್ರಯ, ಅನುಪ್ರೇಕ್ಷೆ ತಪ, ಧ್ಯಾನ, ಷಡ್‌ದ್ರವ್ಯ, ವ್ರತ, ಸಮಿತಿ, ಗುಪ್ತಿ ಮುಂತಾದವುಗಳ ಬಗ್ಗೆ ಸ್ಥೂಲ ಪರಿಚಯದ ಗಾಹೆಗಳು ಸಂಕಲಿತಗೊಂಡಿದೆ. ಶ್ರಾವಕ ಹಾಗೂ ಶ್ರಮಣ ಧರ್ಮಗಳ ಅವಲಂಬನೆಯಿಂದ ಹಂತ ಹಂತವಾಗಿ ಸಂಸಾರ ಸುಖದಿಂದ ವಿಮುಖವಾಗಿ ಮೋಕ್ಷ ಸುಖವನ್ನು ಪಡೆಯಲು ಕ್ರಮಿಸುವಂಥ ಮಾರ್ಗದ ಸ್ಥೂಲ ವಿವರಣೆ ಇದೆ.

### ಮೋಕ್ಷ ಮಾರ್ಗಸೂತ್ರ :

ಮೋಕ್ಷವೆಂಬ ಅಂತಿಮ ಸುಖ ಪಡೆಯಲು, ಅತ್ತ ಕ್ರಮಿಸಲು ಅನುಸರಿಸಬೇಕಾದ ಆಚರಣೆಗಳ ವಿವರಣೆ ಇದೆ.

**'ದಂಸಣಣಾಣ ಚರಿತ್ತಾಣಿ ಮೊಕ್ಖ ಮಗ್ಗೋ'** (ದರ್ಶನ ಜ್ಞಾನ ಚಾರಿತ್ರಗಳೇ ಮೋಕ್ಷ ಮಾರ್ಗ) ಎಂದು ಜಿನೇಂದ್ರ ದೇವರು ಹೇಳಿದ್ದಾರೆ. ವ್ರತ, ಶೀಲ, ಗುಪ್ತಿ, ಸಮಿತಿ, ತಪಗಳನ್ನು ನಿಯಮಬದ್ಧವಾಗಿ ಆಚರಿಸಿದರೂ ಆತ್ಮ ಬೇರೆ, ಶರೀರ ಬೇರೆ ಎಂಬ ಭೇದಜ್ಞಾನ ಇಲ್ಲದಿದ್ದರೆ ಅದು ಮಿಥ್ಯಾತ್ವವಾಗುತ್ತದೆ. ಸಂಯಮದಿಂದ ಕೂಡಿದ ತಪದಿಂದ ಕರ್ಮದ ನಿರ್ಜರೆಯಾಗಿ ಸಿದ್ಧಪದವಿ ಪ್ರಾಪ್ತವಾಗುವುದು.

### ರತ್ನತ್ರಯ ಸೂತ್ರ :

ಧರ್ಮದಲ್ಲಿ ಶ್ರದ್ಧೆ, ಆಗಮಗಳಲ್ಲಿ ತಿಳುವಳಿಕೆ ಹಾಗೂ ತಪದಲ್ಲಿ ಲೀನವಾಗುವುದೇ ದರ್ಶನ-ಜ್ಞಾನ-ಚಾರಿತ್ರಗಳು. ಸಮ್ಯಕ್ತ್ವ ಸಹಿತವಾದ ದರ್ಶನ, ಜ್ಞಾನ, ಚಾರಿತ್ರಗಳೇ ರತ್ನತ್ರಯಗಳು. ಅವು ತಪ ಹಾಗೂ ಸಂಯಮದೊಂದಿಗೆ ಒಂದಕ್ಕೊಂದು ಪೂರಕವಾಗಿದ್ದಾಗ ಮುಕ್ತಿ ಸುಖ ಪ್ರಾಪ್ತವಾಗುವುದು.

## ಸಮ್ಯಗ್ದರ್ಶನ:

ರತ್ನತ್ರಯಗಳಲ್ಲಿ ಶ್ರೇಷ್ಠವಾದುದು ಸಮ್ಯಗ್ದರ್ಶನ. 'ಮೊಕ್ಷಮಹಾರುಕ್ಷ ಮೂಲಂ' (ಮೋಕ್ಷವೆಂಬ ಮಹಾವೃಕ್ಷಕ್ಕೆ ಮೂಲ). ಸಮ್ಯಗ್ದರ್ಶನ ಭ್ರಷ್ಟವಾದರೆ ಚಾರಿತ್ರ, ಜ್ಞಾನಗಳು ಭ್ರಷ್ಟವಾದಂತೆ. ಸಾವಿರ ಕೋಟಿ ವರ್ಷ ತಪಸ್ಸು ಮಾಡಿದರೂ ನಿರ್ವಾಣ ಸಿದ್ಧಿಸುವುದಿಲ್ಲ.

### ಸಮ್ಯಗ್ದರ್ಶನ ಅಂಗ:

ಸಮ್ಯಗ್ದೃಷ್ಟಿಗೆ ಅವಶ್ಯಕವಾದ ನಿಶ್ಯಂಕ, ನಿಷ್ಕಾಂಕ್ಷೆ ನಿರ್ವಿಚಿಕಿತ್ಸೆ ಅಮೂಢದೃಷ್ಟಿ, ಉಪಗೂಹನ, ಸ್ಥಿತಿಕರಣ, ವಾತ್ಸಲ್ಯ ಮತ್ತು ಪ್ರಭಾವನ ಎಂಬ ಎಂಟು ಅಂಗಗಳ ಸ್ಥೂಲವಾದ ವಿವರಣೆ ಇಲ್ಲಿದೆ.

## ಸಮ್ಯಜ್ಞಾನ ಸೂತ್ರ:

ಕಷಾಯ ಹಾಗೂ ವಿಷಯಗಳ ನಿರೋಧದಿಂದ ಆತ್ಮಶುದ್ಧಿ ಆಗುವುದು. ಆಗ ರಾಗ ದೂರವಾಗಿ ಸರ್ವರಲ್ಲೂ ಮೈತ್ರಿಭಾವ ಉಂಟಾಗುವುದು. ಆತ್ಮ ಹಾಗೂ ಶರೀರವನ್ನು ಭೇದ ಜ್ಞಾನದಿಂದ ತಿಳಿಯುವ ಜ್ಞಾನವೇ ಸಮ್ಯಜ್ಞಾನ.

## ಸಮ್ಯಕ್ ಚಾರಿತ್ರ್ಯ:

ಜಿನರ ಬೋಧನೆಯಲ್ಲಿ ಶ್ರದ್ಧೆ ಇಟ್ಟು ಆಚರಣೆಯಲ್ಲಿ ತರುವುದೇ ಸಮ್ಯಕ್ ಚಾರಿತ್ರ್ಯ. ವಿಪುಲವಾದ ಶಾಸ್ತ್ರಾಧ್ಯಾಯನ ಮಾಡಿದ್ದರೂ ಸಂಯಮ ರಹಿತವಾದ ತಪಸ್ಸು ಕುರುಡನ ಮುಂದೆ ಕೋಟಿ ರೂಪಾಯಿಗಳಿದ್ದಂತೆ, ನಿರರ್ಥಕವಾಗುವುದು.

## ಸಮನ್ವಯ :

ನಿಶ್ಚಯ ಚಾರಿತ್ರ್ಯ ಪರಮಗುರಿಯಾಗಿ ಅದಕ್ಕೆ ವ್ಯವಹಾರ ಚಾರಿತ್ರ್ಯ ಸಾಧಕವಾದರೆ ಮೋಕ್ಷವೆಂಬ ಗಮ್ಯವನ್ನು ತಲುಪಬಹುದು. ಕ್ರೋಧಾದಿ ಕಷಾಯ ಹಾಗೂ ಮೋಹ, ವೈರಗಳನ್ನು ಜಯಿಸಿದಾಗ ಶುದ್ಧಭಾವ ಪ್ರಕಟವಾಗುವುದು.

## ಸಾಧನ ಸೂತ್ರ:

ಆಹಾರ, ಆಸನ ಹಾಗೂ ನಿದ್ರೆಯ ಮೇಲೆ ವಿಜಯ ಸಾಧಿಸಿದಾಗ ಜ್ಞಾನ ಪ್ರಾಪ್ತವಾಗುವುದು. ಹೀಗೆ ಪ್ರಾಪ್ತವಾದ ಸಂಪೂರ್ಣ ಜ್ಞಾನದಿಂದ ಅಜ್ಞಾನ, ಮೋಹ, ರಾಗ, ದ್ವೇಷಗಳು ದೂರವಾಗಿ ಮೋಕ್ಷ ಸುಖ ಲಭ್ಯವಾಗುವುದು.

## ದ್ವಿವಿಧ ಸೂತ್ರ:

ಶ್ರಾವಕ ಹಾಗೂ ಮುನಿಗಳ ಆಚರಣೆಯ ಸ್ಥೂಲವಾಗಿ ಪರಿಚಯಿಸುವ ಗಾಹೆಗಳು ಇಲ್ಲಿ ಸಂಕಲಿತಗೊಂಡಿವೆ. ದಾನ, ಪೂಜೆ ಶ್ರಾವಕರಿಗೆ ಪ್ರಮುಖ ಕ್ರಿಯಗಳಾದರೆ, ಮುನಿಗಳಿಗೆ ಧ್ಯಾನ, ಅಧ್ಯಯನ ಮುಖ್ಯವಾದುದು. ಶಿಥಿಲಾಚಾರಿ ಮುನಿಗಳಿಗಿಂತ ಸಂಯಮ ಸಹಿತರಾದ ಶ್ರಾವಕರು ಶ್ರೇಷ್ಠರಾಗುತ್ತಾರೆ.

## ಶ್ರಾವಕ ಧರ್ಮಸೂತ್ರ:

ಶ್ರಾವಕನು ಪಾಲಿಸಬೇಕಾದ ಆಚಾರಗಳನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ. ದಾರ್ಶನಿಕನಾದ ಶ್ರಾವಕ ಸಪ್ತವ್ಯಸನ, ಪಂಚಪಾಪ, ಪಂಚ ಔದುಂಬರ ಫಲ ಹಾಗೂ ಮಧು, ಮದ್ಯ, ಮಾಂಸಗಳನ್ನು ತ್ಯಜಿಸಬೇಕು. ಶಿಕ್ಷಾವ್ರತ, ಗುಣವ್ರತ, ಸಾಮಾಯಿಕಗಳನ್ನು ನಿಷ್ಠೆಯಿಂದ ಪಾಲಿಸುತ್ತ ಚತುರ್ವಿಧ ದಾನಗಳಲ್ಲಿ ತೊಡಗಬೇಕು. ಪಂಚಾಣುವ್ರತಗಳನ್ನು ನಿಯಮ ಹಾಗೂ ನಿಷ್ಠೆಯಿಂದ ಸ್ಥೂಲವಾಗಿ ಪಾಲಿಸುವುದೇ ಶ್ರಾವಕ ಧರ್ಮ.

## ಶ್ರಮಣ ಧರ್ಮ ಸೂತ್ರ :

ಶ್ರಮಣ ಅಂದರೆ ಜೈನ ಮುನಿಗಳು. ಈ ಸೂತ್ರವಿಭಾಗದಲ್ಲಿ ಮುನಿಗಳ ಆಚರಣೆಯನ್ನು ಪ್ರಸ್ತಾಪಿಸಲಾಗಿದೆ. ಜ್ಞಾನ ಮತ್ತು ದರ್ಶನಗಳಿಂದ ಸಂಪನ್ನರಾಗಿ ಸಂಯಮ ಹಾಗೂ ತಪಗಳಲ್ಲಿ ಮಗ್ನರಾದವರೇ ಸಾಧುಗಳು. ಸಕಲ ಜೀವಿಗಳಲ್ಲೂ ಸಮತಾ ಭಾವವಿಟ್ಟ ಮುನಿಗಳು ಸುಖ-ದುಃಖ, ಜನ್ಮ-ಮರಣ ಎಲ್ಲದರಲ್ಲೂ ಸಮಭಾವ ತೋರುತ್ತಾರೆ. ಮಮತ್ವರಹಿತರು, ನಿರಹಂಕಾರಿ, ನಿಸ್ಸಂಗರಾದ (ಶ್ರಮಣರು) ಮುನಿಗಳು ಹದಿನೆಂಟು ದೋಷಗಳನ್ನು ಗೆದ್ದು ದೇಹದ ಬಾಧೆಗಳನ್ನು ಸಹಿಸುವರು. ಕೇವಲ ತಲೆ ಬೋಳಿಸುವುದರಿಂದ ಶ್ರಮಣನಾಗುವುದಿಲ್ಲ. ಸಮತಾಭಾವದಿಂದ ಶ್ರಮಣನಾಗುತ್ತಾನೆ.

## ವೇಷ-ಲಿಂಗ:

ಸಂಯಮ ಮಾರ್ಗದಲ್ಲಿ ಸಾಧುವೇಷವೇ ಪ್ರಮಾಣವಲ್ಲ. ಭಾವದ ವಿಶುದ್ಧಿಗಾಗಿ ಬಾಹ್ಯಪರಿಗ್ರಹಗಳನ್ನು ತೊರೆದರೆ ಸಾಲದು ಆಂತರಿಕ ಪರಿಗ್ರಹಗಳನ್ನು ತೊರೆಯಬೇಕು ಎಂಬ ಭಾವ ಇಲ್ಲಿ ವ್ಯಕ್ತವಾಗುತ್ತದೆ. ದೇಹದ ಮಮತ್ವ, ಕ್ರೋಧಾದಿ ಕಷಾಯಗಳಿಂದ ವಿಮುಕ್ತರಾಗಿ ಆತ್ಯಧ್ಯಾನದಲ್ಲಿ ಲೀನರಾದವರೇ ಭಾವಲಿಂಗಿಗಳು.

## ವ್ರತ ಸೂತ್ರ :

ಪಂಚಾಣುವ್ರತಗಳಾದ ಅಹಿಂಸೆ, ಸತ್ಯ, ಆಸ್ತೇಯ, ಬ್ರಹ್ಮಚರ್ಯ ಹಾಗೂ ಅಪರಿಗ್ರಹಗಳನ್ನು ಮುನಿಗಳು ಮಹಾವ್ರತಗಳೆಂದು ಕಟ್ಟುನಿಟ್ಟಾಗಿ ಆಚರಿಸಬೇಕು. ಪಕ್ಷಿಯಂತೆ ನಿರಪೇಕ್ಷಾ ಭಾವದಿಂದ ಆಕ್ಷಣಕ್ಕೆ ಬೇಕಾದುದನ್ನು ಮಾತ್ರ ಸ್ವೀಕರಿಸಬೇಕು. ಹಾಸಿಗೆ, ಆಹಾರ, ಆಸನ ಯಾವುದರಲ್ಲೂ ಮಮತ್ವ ಇಡಬಾರದು. ಮೋಕ್ಷಾಭಿಲಾಷಿ ಶರೀರವನ್ನು ಕೂಡ ಪರಿಗ್ರಹವೆಂದು ಬಗೆದು ಉಪೇಕ್ಷೆ ಮಾಡಬೇಕೆಂದು ಹೇಳಿದ್ದಾರೆ.

## ಸಮಿತಿ-ಗುಪ್ತಿ ಸೂತ್ರ :

ಜೀವಿಗಳ ರಕ್ಷಣೆಗಾಗಿ ಮುನಿಗಳು ಕೆಲವು ನಿಯಮಗಳನ್ನು ಕಟ್ಟುನಿಟ್ಟಾಗಿ ಆಚರಿಸುವರು. ಅವೇ ಸಮಿತಿ ಹಾಗೂ ಗುಪ್ತಿಗಳು. ಐದು ಸಮಿತಿಗಳಾದ ಈರ್ಯಾ, ಭಾಷಾ, ಏಷಣಾ, ಆದಾನ ನಿಕ್ಷೇಪಣ, ವ್ಯುತ್ಸರ್ಗ ಹಾಗೂ ಮೂರು ಗುಪ್ತಿಗಳಾದ ಕಾಯ, ಮನೋ, ವಚನ ಗುಪ್ತಿಗಳು ರತ್ನತ್ರಯಗಳನ್ನು ದೃಢವಾಗಿ ಪಾಲಿಸಲು ಸಹಕಾರಿಯಾಗುತ್ತವೆ. ಮುನಿಗಳು ನಡೆಯುವಾಗ, ನುಡಿಯುವಾಗ, ಆಹಾರ ತೆಗೆದುಕೊಳ್ಳುವಾಗ, ಉಪಕರಣಗಳನ್ನು ಇಡುವಾಗ, ಮಲಮೂತ್ರ ವಿಸರ್ಜಿಸುವಾಗ ಜೀವ ಹಿಂಸೆಯಾಗದಂತೆ ಸಮಿತಿ ಹಾಗೂ ಗುಪ್ತಿಗಳು ತಡೆಗಟ್ಟುತ್ತವೆ. ಸಾಧುಗಳು ಚಾರಿತ್ರ್ಯದಲ್ಲಿ ಸ್ಥಿರವಾಗಿರಲು ತಾಯಿಯಂತೆ ರಕ್ಷಿಸುತ್ತದೆ. ಆದುದರಿಂದ ಅವುಗಳನ್ನು ಪ್ರವಚನ ಮಾತೆಯರೆಂದು ಕರೆಯುತ್ತಾರೆ.

## ಆವಶ್ಯಕ ಸೂತ್ರ:

ನೆಲೆಗೊಂಡ ಚಾರಿತ್ರ್ಯ ಮತ್ತು ದೃಢವಾಗಲು ಆರು ಅವಶ್ಯಕ ಕ್ರಿಯೆಗಳು ಅತ್ಯವಶ್ಯ ಎಂದು ಇಲ್ಲಿನ ಗಾಹೆಗಳಿಂದ ವ್ಯಕ್ತವಾಗುತ್ತದೆ. ಸಾಮಾಯಿಕ, ಚತುರ್ವಿಶಂತಿ ಸ್ತವನ, ವಂದನ, ಪ್ರತಿಕ್ರಮಣ, ಕಾಯೋತ್ಸರ್ಗ, ಪ್ರತ್ಯಾಖ್ಯಾನ ಎಂಬ ಷಡಾವಶ್ಯಕ ಕ್ರಿಯೆಗಳನ್ನು, ದಿನನಿತ್ಯ, ಆಚರಣೆಗಳಲ್ಲಿ ತರಬೇಕು.

## ತಪ ಸೂತ್ರ :

ಕಷಾಯ ಹಾಗೂ ವಿಷಯಗಳ ನಿಗ್ರಹ, ಬ್ರಹ್ಮಚರ್ಯ ಪಾಲನೆ. ಜಿನಪೂಜೆ, ಉಪವಾಸ ಇವುಗಳನ್ನು ಭಕ್ತಜನರು ತಪ ಎನ್ನುತ್ತಾರೆ. ಇದರಲ್ಲಿ ಎರಡು ವಿಧ- ಬಾಹ್ಯತಪ ಹಾಗೂ ಅಭ್ಯಂತರ ತಪ. ಬಾಹ್ಯತಪದಲ್ಲಿ ಆಹಾರದಲ್ಲಿ ಮಿತಿ, ಅನಾಸಕ್ತಿ ಹಾಗೂ ಶರೀರದ ಬಾಧೆಯನ್ನು ಸಹಿಸುವುದು. ವಿವಿಧ ಸ್ಥಳವಾಗಲಿ, ಶಯ್ಯೆಯಾಗಲಿ ಗಣನೆಗೆ ಬರಬಾರದು.

ಅಭ್ಯಂತರ ತಪ ಮೋಕ್ಷಾಭಿಲಾಷಿಗೆ ಬಹಳ ಮುಖ್ಯವಾದುದು. ಮುನಿಗಳ ಸೇವೆ, ಶಾಸ್ತ್ರಾಧ್ಯಯನ, ಧ್ಯಾನ, ಗುರುಹಿರಿಯರಲ್ಲಿ ಭಕ್ತಿ, ವ್ರತ, ಸಮಿತಿ, ಶೀಲ, ಸಂಯಮ ಹಾಗೂ ಇಂದ್ರಿಯ ನಿಗ್ರಹಗಳ ಪಾಲನೆ ಅಭ್ಯಂತರ ತಪದಲ್ಲಿ ಪ್ರಮುಖವಾದ ತಪಸ್ಸುಗಳು. ಕಾಯೋತ್ಸರ್ಗ ಸ್ಥಿತಿಯಲ್ಲಿ ಸಾಧುಗಳು ದೇವ, ಮಾನವ, ತಿರ್ಯಕ್‌ಗಳಿಂದ ಉಂಟಾಗುವ ಸಮಸ್ತ ಉಪಸರ್ಗಗಳನ್ನು ಸಮಭಾವದಿಂದ ಸಹಿಸುವರು.

## ಧ್ಯಾನಸೂತ್ರ:

ಧ್ಯಾನ ಮಾಡುವ ಬಗ್ಗೆ ಹಾಗೂ ಅದರ ಮಹತ್ವವನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ. ಮನಸ್ಸಿನ ಏಕಾಗ್ರತೆಯೇ ಧ್ಯಾನ. ಚಂಚಲವಾದ ಮನಸ್ಸು ಸ್ಥಿರವಾಗಿ ಒಂದೆಡೆ ಕೇಂದ್ರೀಕರಿಸಲು ಧ್ಯಾನ ಸಹಕಾರಿ. ರಾಗದ್ವೇಷ ರಹಿತನಾಗಿ ಧ್ಯಾನದಲ್ಲಿ ಮಗ್ನನಾದವನಿಗೆ ಮನಸ್ಸು ಶಾಂತವಾಗಿ ನಿಶ್ಚಲತೆ ಮೂಡುತ್ತದೆ. ಪರೀಷಹ, ಉಪಸರ್ಗಗಳಿಗೆ ವಿಚಲಿತನಾಗದೆ ಕರ್ಮವೆಂಬ ಇಂಧನವನ್ನು ಸುಟ್ಟು ಭಸ್ಮ ಮಾಡುತ್ತಾನೆ. ಶರೀರಕ್ಕೆ ಶಿರೋಭಾಗ ಹೇಗೆ ಮುಖ್ಯವೋ ಹಾಗೆ ಧರ್ಮಕ್ಕೆ ಧ್ಯಾನ ಮುಖ್ಯ.

## ಅನುಪ್ರೇಕ್ಷಾಸೂತ್ರ:

ಅನುಪ್ರೇಕ್ಷೆ ಎಂದರೆ ಚಿಂತನೆ. ಅನಿತ್ಯತೆ, ಅಶರಣತೆ, ಏಕತ್ವ, ಅನ್ಯತ್ವ, ಸಂಸಾರ, ಲೋಕ, ಅರುಚಿ, ಆಸ್ರವ, ಸಂವರ, ನಿರ್ಜರ, ಧರ್ಮ ಹಾಗೂ ಬೋಧಿ ಎಂಬ ಹನ್ನೆರಡು ಭಾವನೆಗಳ- ಚಿಂತನೆಯ- ಗಾಹೆಗಳನ್ನು ಇಲ್ಲಿ ಸಂಕಲಿಸಲಾಗಿದೆ. ದ್ವಾದಶಾನುಪ್ರೇಕ್ಷೆಗಳ ಚಿಂತನೆ ಸಂಸಾರದ ಅಸಾರತೆ, ಅನಿತ್ಯತೆಯನ್ನು ಸ್ಥಿರಗೊಳಿಸಿ ವಿರಾಗವು ದೃಢವಾಗುವಂತೆ ಮಾಡುತ್ತದೆ. ಆಗ ಸಂಸಾರ ಹೇಯವೆನಿಸಿ ಮುಕ್ತಿ ಸುಖ ಉಪಾದೇಯವೆನಿಸುತ್ತದೆ.

## ಲೇಶ್ಯಾ ಸೂತ್ರ:

ಕಷಾಯಗಳ ಉದಯದಿಂದ ಅನುರಂಜಿತವಾದ ಮನ-ವಚನ-ಕಾಯಗಳಲ್ಲಿ ಕಂಡುಬರುವ ಪರಿಣಾಮವೇ ಲೇಶ್ಯೆ. ಜೀವಿಯ ಶುಭಾಶುಭ ಪರಿಣಾಮಗಳನ್ನು ತಿಳಿಸಲು ಸಾಂಕೇತಿಕ ಆರು ಬಣ್ಣಗಳಿಗೆ ಹೋಲಿಸುತ್ತಾರೆ. ಕೃಷ್ಣ ನೀಲಿ, ಕಾಪೋತ ಲೇಶ್ಯೆಗಳು ಅಶುಭ ಪರಿಣಾಮದ್ದಾದರೆ ಪೀತ, ಪದ್ಮ, ಶುಕ್ಲ ಶುಭ ಪರಿಣಾಮದವಾಗುತ್ತವೆ. ಫಲಭರಿತ ಮರದ ಉದಾಹರಣೆಯೊಂದಿಗೆ ಲೇಶ್ಯೆಗಳ ವಿವರವನ್ನು ಸವಿಸ್ತಾರವಾಗಿ ಹೇಳಲಾಗಿದೆ.

## ಆತ್ಮವಿಕಾಸ ಸೂತ್ರ : (ಗುಣಸ್ಥಾನ)

ಮೋಹನೀಯ ಕರ್ಮದ ಉದಯದಿಂದ ಆಗುವ ಪರಿಣಾಮ ಹಾಗೂ ಅದರ ಅವಸ್ಥೆಗಳನ್ನು ತಿಳಿಸುವ ಶ್ರೇಣಿಗಳಿಗೆ ಗುಣಸ್ಥಾನ ಎನ್ನುತ್ತಾರೆ. ಮಿಥ್ಯಾತ್ವ ಮುಂತಾದ ಹದಿನಾಲ್ಕು ಗುಣಸ್ಥಾನಗಳಿವೆ. ಸಂಪೂರ್ಣವಾಗಿ ಮೊಹ ನಷ್ಟವಾದಾಗ ಸ್ಫಟಿಕದ ಪಾತ್ರೆಯಲ್ಲಿಟ್ಟ ಶುದ್ಧ ಜಲದಂತೆ ಮನಸ್ಸು ಪರಿಶುದ್ಧವಾಗಿರುವುದು. ಕೇವಲ ಜ್ಞಾನದಿಂದ ಅಜ್ಞಾನವೆಂಬುದು ಪೂರ್ಣವಾಗಿ ಅಭಾವವಾದಾಗ ಒಂಬತ್ತು ಕೇವಲಲಬ್ಧಿಗಳು ಪ್ರಾಪ್ತವಾಗುತ್ತವೆ. ಅಷ್ಟಕರ್ಮಗಳಿಂದ ವಿದೂರನಾದ ಸಿದ್ಧ ಜೀವ ನಿರ್ಲಿಪ್ತ, ನಿತ್ಯ ನೂತನ, ನಿರಂಜನನಾಗಿ ಲೋಕಾಗ್ರದಲ್ಲಿ ನೆಲಸುವನು.

## ಸಲ್ಲೇಖನಾ ಸೂತ್ರ :

ಹುಟ್ಟಿದವರು ಸಾಯಲೇಬೇಕು. ಆದರೆ ಸಾವು ಉತ್ತಮವಾಗಿರಬೇಕು. ದೇಹ ದುರ್ಭರವಾದಾಗ, ಸಂಕಟದಿಂದ ಸಾಯುವುದಕ್ಕಿಂತ ಕ್ರಮವಾಗಿ ಆಹಾರಾದಿಗಳನ್ನು ಕಡಿಮೆ ಮಾಡುತ್ತಾ, ಕೊನೆಗೆ ಪೂರ್ಣ ಉಪವಾಸವಿದ್ದು ಶಾಂತಿಯಿಂದ ಶರೀರವನ್ನು ತ್ಯಜಿಸುವುದೇ ಸಮಾಧಿಮರಣ. ಸಲ್ಲೇಖನದಲ್ಲಿ ಎರಡು ವಿಧ, ಬಾಹ್ಯ ಹಾಗೂ ಅಭ್ಯಂತರ. ಆಹಾರಾದಿಗಳನ್ನು ತ್ಯಜಿಸಿ ಶರೀರವನ್ನು ಕೃಶಗೊಳಿಸುವುದು ಬಾಹ್ಯವಾದರೆ, ಕಷಾಯಗಳನ್ನು ಕೃಶಗೊಳಿಸುತ್ತಾ ಆತ್ಮ ನಿರ್ಮಲ ಹಾದಿಯತ್ತ ಸಾಗುವುದೇ ಅಭ್ಯಂತರ ಸಲ್ಲೇಖನ. ದೇಹ ಹಾಗೂ ಸಂಸಾರದ ಮಮತ್ವ ತೊರೆದು ಧ್ಯಾನದಲ್ಲಿ ನಿರತನಾದರೆ ಕರ್ಮ ನಿರ್ಜರೆಯಾಗಿ ಮೋಕ್ಷಮಾರ್ಗದಲ್ಲಿ ಕ್ರಮಿಸುವನು.

# ೩. ತತ್ವದರ್ಶನ ಖಂಡ

ತೃತೀಯ ಖಂಡವಾದ ತತ್ವದರ್ಶನದಲ್ಲಿ ಜೀವಾಜೀವಾ ಮುಂತಾದ ಸಪ್ತತತ್ವ, ಅದರೊಂದಿಗೆ ಸೇರಿದ ಪಾಪ-ಪುಣ್ಯಗಳ ವಿವೇಚನೆಯಿದೆ. ಜೀವಾತ್ಮ ಪುದ್ಗಲ ಮುಂತಾದ ಷಡ್ದ್ರವ್ಯಗಳ ಪರಿಚಯ ಹಾಗೂ ಅವುಗಳ ಸಂಯೋಗ ಹಾಗೂ ವಿಭಾಗದ ಮೂಲಕ ಆಗುವ ವಿಶ್ವಸೃಷ್ಟಿಯ ಆಕೃತಿಮತೆ, ಅನಾದಿ, ಅನಂತತೆಗಳ ಪ್ರತಿಪಾದನೆ ಇಲ್ಲಿ ಮೂಡಿಬಂದಿದೆ. ಈ ಖಂಡದಲ್ಲಿ ಮೂರು ಪ್ರಕರಣಗಳಿವೆ.

## ತತ್ವದರ್ಶನ:

ಜೈನದರ್ಶನದಲ್ಲಿ ಪ್ರತಿಪಾದಿತವಾಗಿರುವ ತತ್ವಗಳ ಸ್ವರೂಪಗಳನ್ನೊಳಗೊಂಡ ಗಾಹೆಗಳು ಇಲ್ಲಿ ಅಳವಡಿಸಲಾಗಿದೆ. ಸಂಸಾರದಲ್ಲಿ ಜೀವಿಯ ಪರಿಭ್ರಮಣೆ ಹಾಗೂ ಜನನ-ಮರಣಕ್ಕೆ ಕಾರಣದ ಸತ್ಯವನ್ನು ಪರಿಭಾವಿಸಿದಾಗ ಜನೇಂದ್ರರ ಬೋಧನೆಯ ಯಥಾರ್ಥತೆಯ ಅರಿವಾಗುವುದು. ನವ ಪದಾರ್ಥಗಳಾದ ಜೀವ, ಅಜೀವ, ಬಂಧ, ಪಾಪ, ಪುಣ್ಯ, ಆಸ್ರವ, ಸಂವರ, ನಿರ್ಜರ ಮೋಕ್ಷಗಳ ವಿವರವಿದೆ. ಜೀವ ಅನಾದಿನಿಧನ. ಉಪಯೋಗ ಲಕ್ಷಣನು. ಚೇತನಾಶೀಲನು. ಅಜೀವವು ಅಚೇತನ. ಸುಖ-ದುಃಖ, ಅಹಿತ-ಹಿತಗಳ ಅರಿವಾಗುವುದಿಲ್ಲ. ಅಜೀವ ದ್ರವ್ಯಗಳು ಐದು: (೧) ಪುದ್ಗಲ, (೨) ಧರ್ಮದ್ರವ್ಯ, (೩) ಅಧರ್ಮ ದ್ರವ್ಯ, (೪) ಆಕಾಶ, (೫) ಕಾಲ, ಪುದ್ಗಲವು ಮೂರ್ತ್ಯವಾದರೆ ಉಳಿದ ನಾಲ್ಕು ದ್ರವ್ಯಗಳು ಅಮೂರ್ತಗಳು. ಅಮೂರ್ತನಾದ ಆತ್ಮ ನಿತ್ಯ ಹಾಗೂ ಶಾಶ್ವತ. ಅವನು ಆಂತರಿಕ ರಾಗಾದಿ ಭಾವನೆಗಳಿಂದ ಕರ್ಮಗಳಿಂದ ಬಂಧಿತನಾಗುತ್ತಾನೆ. ಶುಭ ಭಾವದಿಂದ ಪುಣ್ಯಕರ್ಮ ಹಾಗೂ ಅಶುಭ ಭಾವದಿಂದ ಪಾಪಕರ್ಮ ಬಂಧವಾಗುತ್ತದೆ. ಮಿಥ್ಯಾತ್ವ, ಅವಿರತಿ, ಕಷಾಯ ಹಾಗೂ ಯೋಗ ಕರ್ಮದ ಆಸ್ರವಕ್ಕೆ ಕಾರಣವಾಗುತ್ತವೆ. ಸಂಯಮ, ವಿರಾಗ, ದರ್ಶನ ಹಾಗೂ ಯೋಗದ ಅಭಾವ ಕರ್ಮದ ತಡೆಗೆ ಕಾರಣವಾಗುತ್ತದೆ. ಮಿಥ್ಯಾತ್ವರೂಪಿ ಆಸ್ರವ ದ್ವಾರವನ್ನು ತಡೆದಾಗ ಪಾಪ ಹಾಗೂ ಪುಣ್ಯಕರ್ಮಗಳ ಬಂಧನವು ಕಡಿಮೆಯಾಗುತ್ತಾ ಹೋಗುತ್ತದೆ. ಸಂವರ ವಿಹೀನವಾದ ಮುನಿ ಕೇವಲ ತಪಸ್ಸು ಮಾಡಿದರೆ ಮುಕ್ತಿ ದೊರಕುವುದಿಲ್ಲ. ಸೇನಾಪತಿಯನ್ನು ಕೊಂದರೆ ಸೈನ್ಯ ಹೇಗೆ ನಾಶವಾಗುವುದೋ ಹಾಗೆ ಪ್ರಮುಖವಾದ ಮೋಹನೀಯ ಕರ್ಮವನ್ನು ನಾಶಗೊಳಿಸಿದರೆ ಸಹಜವಾಗಿ ಸಮಸ್ತ ಕರ್ಮಗಳು ಅಭಾವವಾಗಿ ಹೋಗುತ್ತದೆ. ಹೀಗೆ ಸಂಯಮ ಧಾರಣೆ ಮಾಡಿದ ಮುನಿ ತಪಸ್ಸು ಮಾಡಿದರೆ ಸಂಚಿತಗೊಂಡ ಪಾಪವೆಲ್ಲಾ ನಿರ್ಜರೆಯಾಗುವುದು. ಆಗಮಗಳಲ್ಲೂ ಹೇಳುತ್ತಾರೆ - 'ತಂ ನಾಣೀ ತಿಹಿಂ ಗುತ್ತೋ ಖವೇಇ ಊ ಸಾಸ ಮಿತ್ತೇಣಂ' (ಜ್ಞಾನಿಗಳು ತ್ರಿಗುಪ್ತಿಯ ಮೂಲಕ ಒಂದು ಉಸುರಿನಲ್ಲಿ ಕರ್ಮ ಕ್ಷಯ ಮಾಡಿಕೊಳ್ಳುತ್ತಾರೆ). ದೇವಗತಿಗಳಲ್ಲಿ ಮೂರು

ಕಾಲಕ್ಕೂ ಲಭ್ಯವಾಗುವ ಸುಖಕ್ಕಿಂತ ಅನಂತಪಟ್ಟು ಹೆಚ್ಚಿನ ಸುಖ ಸಿದ್ಧರಿಗೆ ಒಂದು ಕ್ಷಣದಲ್ಲಿ ಅನುಭವವಾಗುತ್ತದೆ. ಅತೀಂದ್ರಿಯ ಅನಂತ ಸುಖ ಅವರಿಗೆ ಪ್ರಾಪ್ತವಾಗುತ್ತದೆ.

## ದ್ರವ್ಯಸೂತ್ರ:

ಷಡ್ ದ್ರವ್ಯಗಳಾದ ಜೀವ, ಧರ್ಮ, ಅಧರ್ಮ, ಕಾಲ, ಅಕಾಶ ಹಾಗೂ ಪುದ್ಗಲಗಳ ವಿವರಣೆ ಇದೆ. ಜೀವ ಚೇತನಾಶೀಲನಾದರೆ ಉಳಿದ ದ್ರವ್ಯಗಳು ಅಚೇತನವಾದುವು. ರೂಪ, ರಸ, ಗಂಧ, ವರ್ಣಾದಿಗಳನ್ನು ಹೊಂದಿರುವ ಪುದ್ಗಲದ್ರವ್ಯ ಮೂರ್ತವಾದರೆ ಉಳಿದವು ಅಮೂರ್ತ. ಜೀವ ಸಕ್ರಿಯವಾಗಲು ಕಾರಣ ಬಾಹ್ಯ ಸಾಧನವಾದ ನೋಕರ್ಮರೂಪವಾದ ಪುದ್ಗಲ. ಪುದ್ಗಲ ಸಕ್ರಿಯವಾಗಲು ಕಾಲ ದ್ರವ್ಯ ಸಾಧನವಾಗುತ್ತದೆ. ಧರ್ಮ, ಅಧರ್ಮ ಹಾಗೂ ಆಕಾಶ ಒಂದೊಂದು ಖಂಡವಾದರೆ ಉಳಿದವು ಅನಂತಾನಂತ. ಷಡ್‌ದ್ರವ್ಯಗಳು ಪರಸ್ಪರ ಹೊಂದಿಕೊಂಡಿದ್ದರೂ ಸ್ವಭಾವದಲ್ಲಿ ಸ್ವತಂತ್ರ. ಮೀನುಗಳ ಚಲನೆಗೆ ನೀರು ಹೇಗೆ ಸಹಾಯಕಾರಿಯೋ ಹಾಗೆಯೇ ಧರ್ಮದ್ರವ್ಯಗಳು ಪುದ್ಗಲಗಳ ಚಲನೆಯಲ್ಲಿ ಸಹಕಾರಿಯಾಗುತ್ತದೆ. ಧರ್ಮಾಸ್ತಿಕಾಯ ರೂಪ, ರಸ, ಗಂಧ, ವರ್ಣ, ಶಬ್ದ ರಹಿತವಾದುದು. ಲೋಕದ ಆಕಾಶವನ್ನು ಹಬ್ಬಿರುವುದು. ಅಸಂಖ್ಯಾತ ಪ್ರದೇಶದಲ್ಲಿ ವ್ಯಾಪ್ತವಾಗಿರುವುದು. ಆಕಾಶ ದ್ರವ್ಯ ಅಚೇತನ, ಅಮೂರ್ತ. ಆದಿ ಅಂತ್ಯವಿಲ್ಲದೆ ಹರಡಿರುವುದು. ಜೀವ ಹಾಗೂ ಪುದ್ಗಲಗಳ ಪರಿವರ್ತನೆ ಕಾಲದ್ರವ್ಯದ ಆಧಾರದ ಮೇಲೆ ನಡೆಯುತ್ತ ಹೋಗುತ್ತದೆ. ಪುದ್ಗಲದಲ್ಲಿ ಎರಡು ವಿಧ - ಅಣು ಹಾಗೂ ಸ್ಕಂದ. ಸ್ಕಂಧದಲ್ಲಿ ಸ್ಥೂಲ-ಅತಿಸ್ಥೂಲ ಮುಂತಾದ ಆರುವಿಧ. ನಾಲ್ಕು ಪ್ರಾಣಗಳಾದ ಬಲ, ಆಯು, ಇಂದ್ರಿಯ ಹಾಗೂ ಉಚ್ಚಾಸಗಳ ಉಲ್ಲೇಖವಿದೆ. ಜೀವ ತನ್ನ ಸಂಕೋಚ ಹಾಗೂ ವಿಸ್ತಾರ ಶಕ್ತಿಯ ಅನುಗುಣವಾಗಿ ಶರೀರ ಧಾರಣೆ ಮಾಡುವುದು. ಹಾಲಿರುವ ಪಾತ್ರೆಯಲ್ಲಿರುವ ಪದ್ಮರಾಗ ಮಣಿ ಹಾಲನ್ನು ಮಾತ್ರ ಬೆಳಗುವ ರೀತಿಯಲ್ಲಿ ದೇಹದೊಳಗಿನ ಆತ್ಮನು ದೇಹವನ್ನು ಮಾತ್ರ ಬೆಳಗುವುದು. ಜ್ಞಾನವೇ ಆತನ ಗುರುತು. ಜೀವಗಳು ಸಂಸಾರಿ ಹಾಗೂ ಮುಕ್ತ ಜೀವವೆಂದು ಎರಡು ವಿಧ. ಎರಡೂ ಚೇತನಾತ್ಮಕರು. ತ್ರಸ ಹಾಗೂ ಸ್ಥಾವರ ಜೀವಿಗಳು ಸಂಸಾರಿ ಜೀವಿಗಳು.

**ಲೋಕವು ಅಕೃತ್ರಿಮವಾದುದು.** ಆದ್ಯಂತವಿಲ್ಲದುದು. ಜೀವ ಆಜೀವ, ಪುದ್ಗಲಗಳು ತುಂಬಿರುವುದು. ಪುದ್ಗಲದ ಪರಮಾಣು ಏಕಪ್ರದೇಶಿ. ಮತ್ತೊಂದು ಪರಮಾಣುವಿನೊಂದಿಗೆ ಬೆರೆತಾಗ ಸ್ಕಂಧದ ರೂಪಧಾರಣೆ ಮಾಡಿ ತನ್ನ ಪರಿಣಮನದ ಮೂಲಕ ಅಗ್ನಿ, ವಾಯು ಮುಂತಾದ ರೂಪದಲ್ಲಿ ವಿಧವಿಧವಾಗಿ ತೋರುವುದು. ರಾಗಾದಿ ಭಾವಗಳಿಂದ ಕರ್ಮ ಸಂಚಿತವಾಗಿ ಮುಂದಣ ಭವಕ್ಕೆ ಬುತ್ತಿಯನ್ನು ಕಟ್ಟಿಕೊಳ್ಳುವನು. ಸಂಚಿತವಾದ ಕರ್ಮಕ್ಕೆ ತಕ್ಕಂತೆ ವಿವಿಧ ಯೋನಿಗಳಲ್ಲಿ ಹುಟ್ಟಿ ಪರಿಭ್ರಮಿಸುವನು.

# ೪ ಸ್ಯಾದ್ವಾದ ಖಂಡ

ಚತುರ್ಥ ಖಂಡವಾದ 'ಸ್ಯಾದ್ವಾದ'ದಲ್ಲಿ ಅನೇಕಾಂತದ ಸಂಕ್ಷಿಪ್ತ ಪರಿಚಯ ಹಾಗೂ ಪ್ರಮಾಣ. ನಯ, ನಿಕ್ಷೇಪ, ಸಪ್ತಭಂಗಿ ಮುಂತಾದ ಗಹನವಾದ ವಿಷಯಗಳ ಸಂಕ್ಷಿಪ್ತ ವಿವರಣೆ ಇದೆ. ವೀರಸ್ತವನದೊಂದಿಗೆ ಗ್ರಂಥ ಮುಕ್ತಾಯವಾಗುತ್ತದೆ. ಈ ಖಂಡದಲ್ಲಿ ಎಂಟು ಪ್ರಕರಣಗಳಿವೆ.

## ಅನೇಕಾಂತ ಸೂತ್ರ :

ಅನೇಕಾಂತವಾದದ ಹೊರತಾಗಿ ಲೋಕವ್ಯವಹಾರ ಯಾವ ವಿಧದಲ್ಲೂ ನಡೆಯಲು ಸಾಧ್ಯವಿಲ್ಲ. 'ತಸ್ಸ ಭುವಣೇಕ್ಕ ಗುರುಣೋ, ಣಮೋ ಅಣೇಗಂತವಾಯಸ್ಸ' (ಅನೇಕಾಂತವಾದ ವಿಶ್ವಕ್ಕೆ ಏಕಮೇವ ಗುರುವೆಂದು ನಮಸ್ಕರಿಸುತ್ತೇನೆ) ಎಂದು ಸೂತ್ರ ಗ್ರಂಥಗಳಲ್ಲಿ ಅನೇಕಾಂತವಾದದ ಮಹತ್ವ ಉಲ್ಲೇಖಿತವಾಗಿದೆ. ಅನೇಕಾಂತವಾದ ಎಂದರೆ ಒಂದು ವಸ್ತುವನ್ನು ಅನೇಕ ದೃಷ್ಟಿಯಿಂದ ಪರಾಮರ್ಶಿಸುವುದು. ಉದಾಹರಣೆಗೆ ಪುರುಷನೊಬ್ಬನೆ ತಂದೆ, ಮಗ, ಮೊಮ್ಮಗ, ಅಣ್ಣ ಮೊದಲಾದ ಹಲವು ಸಂಬಂಧಗಳನ್ನು ಹೊಂದುವನು. ಆದರೆ ಎಲ್ಲರಿಗೂ ತಂದೆಯಾಗಲಾರ. ಮಗನಿಗೆ ಮಾತ್ರ ತಂದೆ. ನಿರ್ವಿಕಲ್ಪ ಹಾಗೂ ಸವಿಕಲ್ಪ ಎರಡೂ ರೂಪದಲ್ಲಿ ಇರುವ ಪುರುಷನೊಬ್ಬನೆ. ಯಾವುದೇ ಒಂದು ದೃಷ್ಟಿಯಿಂದ ಹೇಳಿದರೆ, ಅವನು ಶಾಸ್ತ್ರದಲ್ಲಿ ನಿಶ್ಚಿತ ಮತಿಯವನಲ್ಲಾ ಎಂದರಿವಾಗುತ್ತದೆ.

ಗುಣಗಳಿಗೆ ಆಶ್ರಯ ತಾಣ ದ್ರವ್ಯ. ದ್ರವ್ಯ ಹಾಗೂ ಗುಣಗಳು ಪರ್ಯಾಯಕ್ಕೆ ಆಶ್ರಿತವು. ದ್ರವ್ಯ, ಗುಣ ಹಾಗೂ ಪರ್ಯಾಯ ಒಂದಕ್ಕೊಂದು ಪೂರಕವಾದುದು. ಉತ್ಪತ್ತಿ, ವಿನಾಶ ಸ್ಥಿತಿಗಳು ಪರಿವರ್ತನಾಶೀಲವಾದ ಪರ್ಯಾಯದಲ್ಲಿ ಘಟಿಸುತ್ತಲೇ ಇರುತ್ತವೆ. ದ್ರವ್ಯವನ್ನು ಪರ್ಯಾಯ ದೃಷ್ಟಿಯಲ್ಲಿ ನೋಡಿದರೆ ಉತ್ಪತ್ತಿ ನಾಶಗಳಿರುತ್ತವೆ. ಆದರೂ ದ್ರವ್ಯ ಸದಾ ನಿತ್ಯವಾದುದು.

## ಪ್ರಮಾಣಸೂತ್ರ:

ಸಮ್ಯಜ್ಞಾನದ ಭೇದಗಳ ವಿವರವುಳ್ಳ ಗಾಹೆಗಳನ್ನು ಈ ಸೂತ್ರಭಾಗದಲ್ಲಿ ಸಂಕಲಿಸಲಾಗಿದೆ. ಸಂಶಯ, ಮೋಹ, ವಿಭ್ರಮ ಮುಂತಾದ ಮಿಥ್ಯಾತ್ವದಿಂದ ಮುಕ್ತರಾಗಿ ಸ್ವಪರಗಳ ಭೇದಜ್ಞಾನವನ್ನು ಅರಿಯುವುದೇ ಸಮ್ಯಜ್ಞಾನ. ಇದರಲ್ಲಿ ಐದು ಭೇದ. ಮತಿ, ಶ್ರುತ ಅವಧಿ, ಮನಃಪರ್ಯಯ ಹಾಗೂ ಕೇವಲ ಜ್ಞಾನ. ಮೊದಲ ನಾಲ್ಕು ಕ್ಷಾಯೋಪಶಮಿಕವಾದರೆ, ಕೇವಲಜ್ಞಾನವು ಕ್ಷಾಯಿಕ. ಸಕಲ ಕರ್ಮ ಕ್ಷಯವಾದ ಕಾರಣ ಕೇವಲಜ್ಞಾನ ಪರಿಪೂರ್ಣ.

**ಪ್ರತ್ಯಕ್ಷ-ಪರೋಕ್ಷ-ಪ್ರಮಾಣ:**

ವಸ್ತುವಿನ ಯಥಾರ್ಥ ಸ್ವರೂಪವನ್ನು ಸಮ್ಯಕ್ ರೂಪದಿಂದ ತಿಳಿಯುವುದೇ ಪ್ರಮಾಣ. ಇದರಲ್ಲಿ ಪ್ರತ್ಯಕ್ಷ ಹಾಗೂ ಪರೋಕ್ಷ ಪ್ರಮಾಣವೆಂದು ಎರಡು ವಿಧ. ಕಾಣುವುದು, ಪ್ರತ್ಯಕ್ಷವಾದರೆ, ಕೇಳಿ ತಿಳಿಯುವುದು ಊಹೆಯಿಂದ ನಿರ್ಣಯಿಸುವುದು ಪರೋಕ್ಷ ಶ್ರುತ, ಮತಿ ಜ್ಞಾನಗಳು ಮನಸ್ಸು ಇಂದ್ರಿಯದಿಂದ ಅನುಭವವಾಗುವ ಕಾರಣ ಅದು ಪರೋಕ್ಷ ಅವಧಿ, ಮನಃಪರ್ಯಯ ಹಾಗೂ ಕೇವಲಜ್ಞಾನವು ಪ್ರತ್ಯಕ್ಷಜ್ಞಾನವೆನಿಸುವುವು.

## ನಯಸೂತ್ರ:

ವಸ್ತುವಿನ ಒಂದಂಶವನ್ನು ತಿಳಿಯುವ ಜ್ಞಾನಕ್ಕೆ ನಯ ಎನ್ನುವರು. ನಯವಿಲ್ಲದೆ ಸ್ಯಾದ್ವಾದದ ಅರಿವಾಗುವುದಿಲ್ಲ. ತೀರ್ಥಂಕರರ ವಚನಗಳಲ್ಲಿ ಎರಡುವಿಧವಾದ ಸಾಮಾನ್ಯ ಹಾಗೂ ವಿಶೇಷದಲ್ಲಿ ಪ್ರತಿಪಾದಿತವಾಗುವ ಮೂಲದ ನಯದಲ್ಲಿ ಎರಡುವಿಧ. ದ್ರವ್ಯಾರ್ಥಿಕ ಹಾಗೂ ಪರ್ಯಾಯಾರ್ಥಿಕ.

ಪರ್ಯಾಯಾರ್ಥಿಕ ನಯದ ದೃಷ್ಟಿಯಿಂದ ವಸ್ತುಗಳ ಉತ್ಪತ್ತಿ, ನಾಶಗಳುಂಟು. ವ್ರವ್ಯಾರ್ಥಿಕ ದೃಷ್ಟಿಯಿಂದ ಉತ್ಪತ್ತಿ, ನಾಶಗಳು ಇಲ್ಲ. ನಯದಲ್ಲಿ ಏಳು ವಿಧ. ಅದರಲ್ಲಿ ಮೂರು ದ್ರವ್ಯಾರ್ಥಿಕವಾದರೆ ನಂತರದ ನಾಲ್ಕು ಪರ್ಯಾಯಾರ್ಥಿಕ.

## ಸ್ಯಾದ್ಯಾದ ಅಥವಾ ಸಪ್ತಭಂಗಿ ಸೂತ್ರ :

ನಯ ಹಾಗೂ ಪ್ರಮಾಣದ ವಿಷಯವು ಒಂದಕ್ಕೊಂದರ ಅಪೇಕ್ಷೆ ಇದ್ದರೆ ಅದು ಸಾಪೇಕ್ಷ. ವಿಪರೀತದಲ್ಲಿ ಹೊಂದಿಕೆಯು ಇರದಿರೆ ಅದು ನಿರಪೇಕ್ಷ. ಸ್ವದ್ರವ್ಯ, ಕಾಲ, ಕ್ಷೇತ್ರ, ಭಾವದಲ್ಲಿ ದ್ರವ್ಯವು ಅಸ್ತಿ ಸ್ವಭಾವದಲ್ಲೂ, ಪರದ್ರವ್ಯ, ಕಾಲ, ಕ್ಷೇತ್ರ, ಭಾವದಲ್ಲಿ ನಾಸ್ತಿಸ್ವಭಾವದಲ್ಲೂ ಇರುವುದು. ಹೀಗೆ 'ಸಾದಸ್ತಿ ನಾಸ್ತಿ' ಉಭಯ ರೂಪದಲ್ಲಿ ಕಾಣುವುದು. ವಸ್ತುವಿನ ಒಂದು ಧರ್ಮವನ್ನು ತಿಳಿಯಲು ಪ್ರತಿಪಕ್ಷ ಧರ್ಮಗಳು ತಿಳಿದು ಬರುವುದು. ಆ ಆಸ್ತಿ ನಾಸ್ತಿಗಳನ್ನು ಅರಿಯಲು ಸಪ್ತಭಂಗಿ ಸೂತ್ರಗಳನ್ನು ಬಳಸಬೇಕು.

## ಸಮನ್ವಯ ಸೂತ್ರ :

ಇಲ್ಲಿ ನಯ, ಶ್ರುತಜ್ಞಾನ, ಅನೇಕಾಂತವಾದ ವಿಷಯಗಳನ್ನು ಪ್ರಸ್ತಾಪಿಸಿದ್ದಾರೆ. ಶಂಕಾದಿ ದೋಷವಿಲ್ಲದೆ ಅನೇಕಾಂತ ದರ್ಶನದಲ್ಲಿ ಹೇಳುವುದೇ ಶ್ರುತಜ್ಞಾನ. ವಸ್ತುವಿನ ಧರ್ಮವನ್ನು ಹಿಡಿದು ಯಾವುದು ಲೌಕಿಕ ವ್ಯವಹಾರ ಸಾಧಿಸುವುದೋ ಅದೇ ನಯ. ನಯದಲ್ಲಿ ಎರಡು ವಿಧ. ಸುನಯ ಹಾಗೂ ದುರ್ನಯ.

ವಿರೋಧಿಯಾದ ನಯಗಳು, ಸ್ಯಾದ್ವಾದಡಿಯಲ್ಲಿ ಸೇರಿಕೊಂಡು ಸಮ್ಯಕ್ತ್ವ ಭಾವವನ್ನು ಪ್ರಕಟಿಸುವುವು. ಆನೆಯ ಅಂಗಗಳನ್ನು ಸ್ಪರ್ಶಿಸಿದ ಕುರುಡರ ಅಭಿಪ್ರಾಯಗಳು ಭಿನ್ನವಾಗಿದ್ದು ಮಿಥ್ಯೆ ಎನಿಸುತ್ತದೆ. ಆದರೆ ಅವರ ಒಟ್ಟು ಅಭಿಪ್ರಾಯ ಸತ್ಯವಾಗುತ್ತದೆ. ಹಾಗೆಯೇ ಸಮಸ್ತ ನಯಗಳ ಸಮುದಾಯದ ಮೂಲಕ ವಸ್ತುವಿನ ಸಮಸ್ತ ಧರ್ಮವನ್ನು ತಿಳಿಯುವ ಜ್ಞಾನವೆ ಸಮ್ಯಜ್ಞಾನವಾಗುತ್ತದೆ. ಲೋಕದಲ್ಲಿರುವ ಯಾವುದೇ ಧರ್ಮಕ್ಕಾಗಲಿ ಗೌರವ ತೋರಿಸಬೇಕು ಎಂಬ ಅಭಿಪ್ರಾಯ ಇಲ್ಲಿ ವ್ಯಕ್ತವಾಗಿದೆ.

**ನಿಕ್ಷೇಪ :**

ನಾನಾ ವಿಧವಾದ ದ್ರವ್ಯಗಳನ್ನು ತಿಳಿದುಕೊಳ್ಳುವುದಕ್ಕೆ ಹಾಗೂ ತಿಳಿಸುವುದಕ್ಕೆ ಬಳಸುವ ಪದ್ಧತಿಯನ್ನು ನ್ಯಾಯಶಾಸ್ತ್ರದಲ್ಲಿ 'ನಿಕ್ಷೇಪ' ಎನ್ನುತ್ತಾರೆ. ಇದರಲ್ಲಿ ನಾಲ್ಕು ವಿಧ-ನಾಮ, ಸ್ಥಾಪನಾ, ದ್ರವ್ಯ ಹಾಗೂ ಭಾವ.

**ಸಮಾಪನ :**

ವೈಶಾಲಿ ನಗರಿಯಲ್ಲಿ ಮಹಾವೀರ ಭಗವಾನರು ಮಾಡಿದ ಉಪದೇಶದ ಸಾರ ಈ ಸೂತ್ರದಲ್ಲಿ ಹೇಳಿದ್ದಾರೆ. 'ಜನ-ಮರಣ ಚತುರ್ಗತಿ, ಲೋಕದ ಶಾಶ್ವತ- ಅಶಾಶ್ವತ, ಸಾಮಾಯಿಕ, ಕರ್ಮದ ಆಸ್ರವ ಹಾಗೂ ಸಂವರೆಯನ್ನು ಭಾವಿಸಿ ನಿರ್ಜರೆಗೊಳಿಸುವುದನ್ನು ತಿಳಿದವನು ಸಮ್ಯಕ್ತ್ವ ವಿಚಾರವನ್ನು ಮಾತಾಡಲು ಅರ್ಹನು. ಅಮೃತಸಮಾನವಾದ ಜಿನವಚನದಿಂದ ಸುಗತಿ ಮಾರ್ಗವನ್ನು ಹಿಡಿಯಬಹುದೆಂದು ಹೇಳಿದ್ದಾರೆ.

## ವೀರಸ್ತವನ :

ನಲ್ವತ್ತನಾಲ್ಕನೆಯ ಈ ಕೊನೆಯ ಪ್ರಕರಣದಲ್ಲಿ ಏಳು ಗಾಹೆಗಳಲ್ಲಿ ಮಹಾವೀರ ಭಗವಾನ್‌ರ ಸ್ತವನವಿದೆ.

ಮೃಗಗಳಲ್ಲಿ ಸಿಂಹ, ಆನೆಗಳಲ್ಲಿ ಐರಾವತ, ದಾನದಲ್ಲಿ ಅಭಯದಾನ ಶ್ರೇಷ್ಠವಾಗಿರುವಂತೆ ನಿರ್ಮಾಣವಾದಿಗಳಲ್ಲಿ ಜ್ಞಾತಪುತ್ರನಾದ ವೀರ ಭಗವಾನನು ಶ್ರೇಷ್ಠನು.

ಜಗತ್ತಿನ ಜೀವಿಗಳ ಉತ್ಪತ್ತಿಸ್ಥಾನವನ್ನು ತಿಳಿದವನು, ಜಗತ್ತಿನ ಗುರು, ಜಗತ್ತಿನ ಆನಂದದಾತ, ಜಗತ್ತಿನ ಒಡೆಯ, ಜಗತ್ತಿನ ಬಂಧು, ಜಗತ್ತಿನ ಪಿತಾಮಹನಾದ ಭಗವಂತನಿಗೆ ಜಯವಾಗಲಿ - ಎಂಬ ಆಶಯದೊಂದಿಗೆ ಗ್ರಂಥ ಮುಕ್ತಾಯಗೊಳ್ಳುವುದು.

ಇದುವರೆಗೆ ಈ ಕಿರುಪುಸ್ತಕದಲ್ಲಿ ''ಸಮಣಸುತ್ತಂ'ನಲ್ಲಿರುವ ವಿಷಯಗಳನ್ನು ಸಂಕ್ಷಿಪ್ತವಾಗಿ ನಿರೂಪಿಸಲಾಗಿದೆ. ಈ ಸಂಗತಿಗಳನ್ನು ಗ್ರಂಥದಲ್ಲಿ ಸೊಗಸಾದ ಉಪಮೆ, ರೂಪಕ, ದೃಷ್ಟಾಂತಗಳಲ್ಲಿ ಪ್ರತಿಪಾದಿಸಲಾಗಿದೆ. ಮೂಲಗ್ರಂಥವನ್ನು ಓದುವಾಗ ಆ ಚೆಲುವನ್ನು ಸವಿಯಬಹುದಾಗಿದೆ.